ESTD : 1943 REGD. : 1990

BILLAVA SEVA SANGHA KUNDAPURA ® MUMBAI

ಬಿಲ್ಲವ ಸೇವಾ ಸಂಘ ಕುಂದಾಪುರ (ರಿ) ಮುಂಬಯಿ

Reg. No.: E - 0012620 [Mumbai] Dated : 29/01/1990

Regd. Office : No. 22-A, Master Building, 3rd Floor, 38, Mohamed Sakoor Marg (Chana Street), Fort, Mumbai-400001
Admin Office: 101, 9 Mansi, Mukund Natu Path, Near Gaondevi Maidan,Naupada, Thane (W) - 400602
Sub Office : 3 & 4 Basement, Rangashri CHS., Kaka Sohoni Path, Off Veer Savarkar Marg, Gantali, Thane (W) - 400 602.
Mobile : 8850202940 | **E-mail :** admin@billavasevasanghakundapuramumbai.com
Website : www.billavasevasanghakundapuramumbai.com



38 ನೇ ವಾರ್ಷಿಕ ವರದಿ

38TH ANNUAL REPORT

2025-2026

ಗೌರವ ಸ್ಮರಣೆ



ಸಂಘದ ಪ್ರಥಮ ಗೌರವಾಧ್ಯಕ್ಷ ಪೂಜನೀಯ

ದಿ. ಸುರೇಶ್ ಎಸ್. ಪೂಜಾರಿ, ಪಡುಕೋಣೆ

ನಿಧನ : 04.06.2025

ಗೌರವ ಶ್ರದ್ಧಾಂಜಲಿ



ಮಹಿಳಾ ಸಮಿತಿ ಗೌರವ ಕಾರ್ಯಾಧ್ಯಕ್ಷೆ

ದಿ. ಶ್ರೀಮತಿ ಸಂತೋಷಿ ಸುರೇಶ್ ಪೂಜಾರಿ

ನಿಧನ : 07.05.2026



ಮಾಜಿ ಅಧ್ಯಕ್ಷ

ದಿ. ಶಿವರಾಮ ಟಿ. ಕಂಡ್ಲೂರು

ನಿಧನ : 20.05.2026



ಮಹಿಳಾ ದಿನಾಚರಣೆ ಮತ್ತು ಅರಸಿನ ಕುಂಕುಮ ಕಾರ್ಯಕ್ರಮದಲ್ಲಿ ಸಮಾಜದ ಹಿರಿಯ ಸದಸ್ಯೆ
ಶ್ರೀಮತಿ ಸೀತಾ ಗಣಪ ಪೂಜಾರಿಯವರು ಅತಿಥಿಗಳ ಸಮ್ಮುಖದಲ್ಲಿ ಸನ್ಮಾನಿಸಲ್ಪಟ್ಟಾಗ



ಮಹಿಳಾ ದಿನಾಚರಣೆ ಮತ್ತು ಅರಸಿನ ಕುಂಕುಮ ಕಾರ್ಯಕ್ರಮದಲ್ಲಿ ಸಮಾಜದ ಹಿರಿಯ ಸದಸ್ಯೆ
ಶ್ರೀಮತಿ ಸಾವಿತ್ರಿ ಮಾಚ ಪೂಜಾರಿಯವರು ಅತಿಥಿಗಳ ಸಮ್ಮುಖದಲ್ಲಿ ಸನ್ಮಾನಿಸಲ್ಪಟ್ಟಾಗ



ಸಂಘದ ಗುರು ಚಾವಡಿಯಲ್ಲಿ ಜರಗಿದ 172ನೇ ಬ್ರಹ್ಮಶ್ರೀ ನಾರಾಯಣ ಗುರು ದೇವರ ಜಯಂತಿ ಮತ್ತು ಏಕಾಹ ಭಜನೆ ಕಾರ್ಯಕ್ರಮದಲ್ಲಿ ಸಂಘದ ಹಿರಿಯ ಸದಸ್ಯೆ ಶ್ರೀಮತಿ ಗಿರಿಜಾ ಕೆ. ಹೊಕ್ಕೋಳಿಯವರನ್ನು ಗೌರವಿಸಿದಾಗ.



ಮಹಿಳಾ ದಿನಾಚರಣೆ ಮತ್ತು ಅರಸಿನ ಕುಂಕುಮ ಕಾರ್ಯಕ್ರಮದಲ್ಲಿ
ಸಮಾಜದ ಸ್ನಾತಕೋತ್ತರ ಪದವೀಧರರು ಅತಿಥಿಗಳ ಸಮ್ಮುಖದಲ್ಲಿ ಸನ್ಮಾನಿಸಲ್ಪಟ್ಟಾಗ



ಮಹಿಳಾ ದಿನಾಚರಣೆ ಮತ್ತು ಅರಸಿನ ಕುಂಕುಮ ಕಾರ್ಯಕ್ರಮದಲ್ಲಿ
ಸಮಾಜದ ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಅತಿಥಿಗಳ ಸಮ್ಮುಖದಲ್ಲಿ ಪ್ರತಿಭಾ ಪುರಸ್ಕಾರ ಪ್ರದಾನ



ಮಹಿಳಾ ದಿನಾಚರಣೆ ಮತ್ತು ಅರಸಿನ ಕುಂಕುಮ ಕಾರ್ಯಕ್ರಮದಲ್ಲಿ
ಸಮಾಜದ ಅರ್ಹ ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಅತಿಥಿಗಳ ಸಮ್ಮುಖದಲ್ಲಿ ವಿದ್ಯಾರ್ಥಿವೇತನ ವಿತರಿಸಿದಾಗ..

ESTD : 1943 **REGD : 1990**

ಬಿಲ್ಲವ ಸೇವಾ ಸಂಘ ಕುಂದಾಪುರ (ರಿ) ಮುಂಬಯಿ

Reg. No. E - 0012620 (Mumbai) Dated : 29/01/1990.

38ನೇ ವಾರ್ಷಿಕ ಮಹಾಸಭೆ ಸೂಚನಾ ಪತ್ರ

ಮಾನ್ಯ ಸದಸ್ಯರೇ,

ನಮ್ಮ ಬಿಲ್ಲವ ಸೇವಾ ಸಂಘ ಕುಂದಾಪುರ (ರಿ.) ಮುಂಬಯಿ ಇದರ ಆಡಳಿತ ಮಂಡಳಿಯು ತಾ. 1-4-2025 ರಿಂದ 31-3-2026ನೇ ವರದಿ ವರ್ಷದಲ್ಲಿ ನಡೆಸಿದ ಕಾರ್ಯ ಕಲಾಪಗಳ ಮತ್ತು ಲೆಕ್ಕ ಪರಿಶೋಧಕರಿಂದ ಪರಿಶೋಧಿಸಲ್ಪಟ್ಟ ಆಯ ವ್ಯಯ ಮತ್ತು ಆಸ್ತಿ ವ ಸೊತ್ತುಗಳ ವಿವರಗಳನ್ನೊಳಗೊಂಡ ಸಂಕ್ಷಿಪ್ತ ವರದಿಯನ್ನು ತಮ್ಮ ಮುಂದೆ ತರಲು ಸಂತೋಷ ಪಡುತ್ತೇವೆ.

ಸಂಘದ 38ನೇ ವಾರ್ಷಿಕ ಮಹಾಸಭೆಯು ಇದೇ ತಾ. 15-11-2026 ರಂದು ರವಿವಾರ ಬೆಳಿಗ್ಗೆ 10.30 ಗಂಟೆಗೆ ಸರಿಯಾಗಿ ಆರ್ಯ ಸಮಾಜ ಸಭಾಗೃಹ, 232, ಪೆರಿನ್ ನರಿಮನ್ ಸ್ಟ್ರೀಟ್ (ಬಜಾರ್‌ಗೇಟ್), ಫೋರ್ಟ್, ಮುಂಬಯಿ - 400 001 ಇಲ್ಲಿ ಜರಗಲಿರುವುದು. ಆ ಪ್ರಯುಕ್ತ ತಾವು ಕ್ಲಪ್ತ ಸಮಯದಲ್ಲಿ ಸಭೆಯಲ್ಲಿ ಹಾಜರಿದ್ದು, ಸಭೆಯ ಕಲಾಪಗಳಲ್ಲಿ ಪಾಲ್ಗೊಂಡು, ಸಭೆಯು ಸುಸಾಂಗವಾಗಿ ಜರಗಲು ಸಹಕರಿಸಬೇಕಾಗಿ ವಿನಂತಿ.

ಸದಸ್ಯರ ಹಾಜರಾತಿ ಕುರಿತು ಸೂಚನೆ : ನಿಗದಿತ ಸಮಯಕ್ಕೆ ಘಟನೆ (Bye law) ನಿಯಮದಂತೆ ಸಾಕಷ್ಟು ಸದಸ್ಯರ ಹಾಜರಾತಿ (ಕೋರಮ್) ಆಗದಿದ್ದರೆ ಸಭೆಯನ್ನು ಅರ್ಧಗಂಟೆ ಮುಂದೂಡಿ, 'ಮುಂದುವರಿಸಿದ ಸಭೆ' (Adjourned Meeting) ಎಂದು ಅದೇ ಸಭಾಂಗಣದಲ್ಲಿ ಕಾರ್ಯಸೂಚಿಯಂತೆ ಜರಗಿಸಲಾಗುವುದು.

ಸ್ಥಳ : ಮುಂಬಯಿ
ತಾ. : 25-10-2026

ಆಡಳಿತ ಮಂಡಳಿಯ ಪರವಾಗಿ,
ಸುಧಾಕರ ಸಿ. ಪೂಜಾರಿ
ಗೌ. ಪ್ರ. ಕಾರ್ಯದರ್ಶಿ

ಕಾರ್ಯಸೂಚಿ

1. ದೀಪ ಪ್ರಜ್ವಲನೆ ಮತ್ತು ಪ್ರಾರ್ಥನೆ
2. ಸ್ವಾಗತ ಭಾಷಣ
3. ಗತ ಮಹಾಸಭೆಯ ವರದಿ ವಾಚನ ಮತ್ತು ಅಂಗೀಕಾರ
4. ಆಡಳಿತ ಸಮಿತಿಯು ಒಪ್ಪಿಸುವ 2025-2026ನೇ ವರ್ಷದ ಚಟುವಟಿಕೆಗಳ (ಪ್ರಸಕ್ತ ಸಾಲಿನ) ವರದಿ ವಾಚನ
5. ಲೆಕ್ಕ ಪರಿಶೋಧಕರಿಂದ ಪರಿಶೋಧಿಸಲ್ಪಟ್ಟ 2025-2026ನೇ ಸಾಲಿನ ಲೆಕ್ಕಪತ್ರಗಳ ಮಂಡನೆ ಮತ್ತು ಅಂಗೀಕಾರ
6. 2026-2028ನೇ ಅವಧಿಗೆ ಲೆಕ್ಕಪರಿಶೋಧಕರ ನೇಮಕಾತಿ ಮತ್ತು ಭತ್ಯೆಯನ್ನು ನಿಗದಿಪಡಿಸುವುದು ಹಾಗೂ ಆಂತರಿಕ ಲೆಕ್ಕ ಪರಿಶೋಧಕರ ನೇಮಕಾತಿ
7. ಸಂಘದ ಸಂವಿಧಾನ (Bye law) ತಿದ್ದುಪಡಿಯನ್ನು ಪ್ರಸ್ತುತ ಪಡಿಸುವುದು ಮತ್ತು ಅಂಗೀಕಾರ
8. 2026-2028ರ ಕಾಲಾವಧಿಗೆ ಸಂಘದ ಆಡಳಿತ ಸಮಿತಿಗೆ ಸಲ್ಲಿಸಿದ ನಾಮಪತ್ರಗಳ ವಿವರಣೆ ಹಾಗೂ ಚುನಾವಣೆ
9. ಸಂಘದ ನೋಂದಣಿ ಕಚೇರಿಯ ದುರಸ್ಥಿಯ ಕುರಿತು ವಿಚಾರ ವಿನಿಮಯ ಮತ್ತು ನಿರ್ಣಯ
10. ಸಂಘದ ಥಾಣೆ ಕಚೇರಿ ಖರೀದಿ ಕರಾರಿನಲ್ಲಿ ಕಂಡು ಬಂದ ವ್ಯತ್ಯಾಸ ಮೊತ್ತದ ಕುರಿತು ಚರ್ಚೆ ಮತ್ತು ನಿರ್ಣಯ
11. ಚಾರಿಟಿ ಕಮಿಷನರ್‌ಗೆ ಸಲ್ಲಿಸಲ್ಪಟ್ಟ ಕಮಿಟಿ ಬದಲಾವಣೆ ವರದಿ ಅಂಗೀಕಾರ ಮತ್ತು ಆಸ್ತಿ ಬದಲಾವಣೆ ವರದಿ ಸಲ್ಲಿಕೆ ಬಗ್ಗೆ ವಿವರಣೆ.
12. ನಿಕಟಪೂರ್ವ ಸಮಿತಿಯ ಸದಸ್ಯರ ವಿಚಾರಣೆ ನಡೆಸಿದ ವಿಚಾರಣಾ ಅಧಿಕಾರಿ ತಾ. 22.08.2026 ರಂದು ಸಲ್ಲಿಸಿದ ವಿಚಾರಣಾ ವರದಿಯ ಬಗ್ಗೆ ವಿವರಣೆ ಮತ್ತು ವರದಿಯ ಪ್ರಕಾರ ಸಂಘದ ಅಧಿನಿಯಮ 5ರ ಅನ್ವಯ ಮಹಾಸಭೆಯು ಕೈಗೊಳ್ಳುವ ನಿರ್ಣಯ
13. ಸದಸ್ಯರಿಂದ ನಿಯಮಾನುಸಾರ ಬಂದ ಪ್ರಶ್ನೆಗಳು
14. ಅಧ್ಯಕ್ಷರ ಅನುಮತಿ ಮೇರೆಗೆ ಇನ್ನಿತರ ವಿಷಯಗಳು
15. ಸಂಘದ ಹಿತಾಭಿವೃದ್ಧಿಯ ಕುರಿತು ಸದಸ್ಯರ ಸಲಹೆ ಸೂಚನೆಗಳು
16. ಗೌರವಾಧ್ಯಕ್ಷರ ಭಾಷಣ.
17. ಅಧ್ಯಕ್ಷರ ಭಾಷಣ.
18. ಧನ್ಯವಾದ ಸಮರ್ಪಣೆ.

ವಿಶೇಷ ಸೂಚನೆ

1. **ಉಮೇದ್ವಾರ ಪತ್ರ ಸಲ್ಲಿಕೆ :** ಅಂದಿನ ಮಹಾಸಭೆಯಲ್ಲಿ 2026-28ನೇ ಕಾಲಾವಧಿಗೆ ಸಂವಿಧಾನದ ನಿಯಮದಂತೆ ನೂತನ ಆಡಳಿತ ಮಂಡಳಿಯ ಸದಸ್ಯರನ್ನು ಆಯ್ಕೆ ಮಾಡಲಿರುವುದರಿಂದ, ಆಡಳಿತ ಸಮಿತಿಯ ಸದಸ್ಯರಾಗ ಬಯಸುವ ಸದಸ್ಯರು ಉಮೇದ್ವಾರ ಪತ್ರವನ್ನು ತುಂಬಿಸಿ ತಾ. 07.11.2026 ಸಂಜೆ ಗಂಟೆ 4.00ರೊಳಗೆ ಸಂಘದ ಥಾಣೆ ಕಾರ್ಯಾಲಯಕ್ಕೆ ತಲುಪಿಸಬೇಕಾಗಿ ವಿನಂತಿ. ಉಮೇದ್ವಾರ ಪತ್ರ ಸಲ್ಲಿಸುವವರು ಮುಂಚಿತವಾಗಿ ಕಾರ್ಯದರ್ಶಿಯವರನ್ನು ದೂರವಾಣಿ (9820776330) ಮೂಲಕ ಸಂಪರ್ಕಿಸಬೇಕಾಗಿ ವಿನಂತಿ.

2. **ಉಮೇದ್ವಾರ ಪತ್ರ ಹಿಂತೆಗೆತ :** ಉಮೇದ್ವಾರ ಪತ್ರ ಹಿಂಪಡೆಯಲು ಇಚ್ಛಿಸುವವರು ತಾ.10.11.2026 ಸಂಜೆ ಗಂಟೆ 4.00ರೊಳಗೆ ಹಿಂದಕ್ಕೆ ಪಡೆದುಕೊಳ್ಳಬಹುದು.

3. **ಮಹಾಸಭೆ ವರದಿ ಮತ್ತು ಲೆಕ್ಕಪತ್ರಗಳ ಬಗ್ಗೆ ವಿವರಣೆ :** ಅಂದಿನ ಮಹಾಸಭೆಯಲ್ಲಿ 37ನೇ ವಾರ್ಷಿಕ ಮಹಾಸಭೆ ವರದಿ, ಆಯ-ವ್ಯಯ ಮತ್ತು ಉಳಿತಾಯ ಪಟ್ಟಿಯ ಕುರಿತು ವಿವರಣೆ ಕೇಳಬಯಸುವವರು ಅದನ್ನು ಮಹಾಸಭೆ ಜರಗುವ ಕನಿಷ್ಠ ಏಳು ದಿನಗಳ ಮುಂಚಿತವಾಗಿ ಗೌರವ ಪ್ರಧಾನ ಕಾರ್ಯದರ್ಶಿಯವರಿಗೆ ಲಿಖಿತ ಮೂಲಕ ತಿಳಿಸಬೇಕು.

4. **ವಿಚಾರಣಾಧಿಕಾರಿಯ ವಿಚಾರಣಾ ವರದಿ ಮತ್ತು ಸಂವಿಧಾನದಲ್ಲಿ ಮಾಡಬಯಸಿದ ತಿದ್ದುಪಡಿಯ ಪ್ರತಿ :** ಈ ಪ್ರತಿಗಳನ್ನು ಪಡೆಯ ಬಯಸುವ ಸದಸ್ಯರು -
   i) ವಿಚಾರಣಾ ಅಧಿಕಾರಿಯು ನಿಕಟಪೂರ್ವ ಸಮಿತಿ ಸದಸ್ಯರ ವಿಚಾರಣೆ ನಡೆಸಿ, ತಾ. 22.08.2026ರಂದು ಸಲ್ಲಿಸಿದ ವಿಚಾರಣಾ ವರದಿಯ ಪ್ರತಿ (ಕಾರ್ಯಸೂಚಿ : 12) ಹಾಗೂ
   ii) ಸಂಘದ ಸಂವಿಧಾನದಲ್ಲಿ ಮಾಡಬಯಸಿದ ತಿದ್ದುಪಡಿಗಳ ಪ್ರತಿ (ಕಾರ್ಯಸೂಚಿ : 7) ಮಹಾಸಭೆ ಜರಗುವ 7 ದಿನಗಳ ಮುಂಚಿತವಾಗಿ ಸಂಘದ ಸಂಪರ್ಕ ಸಂಖ್ಯೆ (8850202940)ಗೆ ವಾಟ್ಸಾಪ್ ಸಂದೇಶವನ್ನು ಕಳುಹಿಸಬೇಕು.

5. **ಹಾಜರಾತಿ ಮತ್ತು ಗುರುತು ಪತ್ರ:** ಮಹಾಸಭೆಗೆ ಬರುವಾಗ ಈ ವರದಿಯ ಪ್ರತಿ, ಸದಸ್ಯತನದ ಸಂಖ್ಯೆ, ಗುರುತಿನ ಪತ್ರ (Identity Proof) ವನ್ನು ಸ್ವಾಗತ ಕಕ್ಷೆಯಲ್ಲಿ ತೋರಿಸಿ, ಮೊಬೈಲ್ ನಂಬರ್, ಇ-ಮೇಲ್ ಐಡಿ ಬರೆದು ಸಹಿ ಮಾಡಬೇಕಾಗಿ ವಿನಂತಿ.

6. **ವಿಳಾಸ ಬದಲಾವಣೆ :** ಸದಸ್ಯರು ತಮ್ಮ ವಿಳಾಸ ಬದಲಾವಣೆಯಾಗಿದ್ದರೆ ಸ್ವಾಗತಕಕ್ಷೆಯಲ್ಲಿ ಲಭ್ಯವಿರುವ ಫಾರ್ಮ್ ತುಂಬಿಸಿ ಸಹಿ ಮಾಡಿಕೊಡಬೇಕಾಗಿ ವಿನಂತಿ.

7. **ಸಂಘದ ಸಂಪರ್ಕ :** ಸಂಘಕ್ಕೆ ಯಾವುದೇ ಪ್ರಕಾರದ ಪತ್ರ ವ್ಯವಹಾರ ಮಾಡ ಬಯಸುವವರು ಸಂಘದ ಥಾಣೆಯ 9 ಮಾನಸಿ ಕಟ್ಟಡದಲ್ಲಿರುವ 101, ಕಾರ್ಯಾಲಯವನ್ನು ಸಂಪರ್ಕಿಸಬೇಕಾಗಿ ವಿನಂತಿ.

8. **ವಿದ್ಯಾರ್ಥಿ ವೇತನ ಮತ್ತು ಪ್ರತಿಭಾ ಪುರಸ್ಕಾರ ವಿತರಣೆ :** ವಿದ್ಯಾರ್ಥಿ ವೇತನ, ಪ್ರತಿಭಾ ಪುರಸ್ಕಾರ ವಿತರಣೆ ಕಾರ್ಯಕ್ರಮವನ್ನು ಪ್ರತ್ಯೇಕವಾಗಿ ಏರ್ಪಡಿಸಿ ಸದಸ್ಯರಿಗೆ ತಿಳಿಸಲಾಗುವುದು.

80G CERTIFICATE FOR TAX BENEFIT FOR DONATION

*** Section 12A Certification :** Unique Registration Number is **AACTBO861CE20219** under 02 - Sub clause (vi) of clause (ac) of sub- section (1) of section 12A renewed with validity for 10 years, covering A.Y. 2027-28 to 2036-37, securing the Trust's tax-exempt status on institutional income.

*** Section 80G Certification :** 80 G as per Income Tax Act 1961 with the Unique Registration Number **AACTBO861CF20225** renewed with validity for 5 years, covering Assessment Years (AY) 2027-28 to 2031-32, enabling our generous donors to claim eligible tax deductions on their contributions and significantly boosting our fundraising capabilities.

ವಿದ್ಯಾರ್ಥಿ ವೇತನ ಮತ್ತು ಪ್ರತಿಭಾ ಪುರಸ್ಕಾರಕ್ಕೆ ಅರ್ಜಿ ಆಹ್ವಾನ

1. ನಮ್ಮ ಸಂಘದ ಸದಸ್ಯರು ಅಥವಾ ಅವರ ಮಕ್ಕಳು ಶಾಲೆ, ಕಾಲೇಜುಗಳಲ್ಲಿ ಅಥವಾ ಯಾವುದೇ ವಿಶ್ವವಿದ್ಯಾಲಯಗಳಲ್ಲಿ 2025-26ನೇ ಶೈಕ್ಷಣಿಕ ವರ್ಷಾಂತಿಕ ಪರೀಕ್ಷೆಗಳಲ್ಲಿ ಈ ಕೆಳಗಿನ ಶ್ರೇಣಿಯಲ್ಲಿ ಉತ್ತೀರ್ಣರಾಗಿದ್ದಲ್ಲಿ ಅವರನ್ನು ಪ್ರತಿಭಾ ಪುರಸ್ಕಾರ ಮತ್ತು ಪ್ರಮಾಣ ಪತ್ರ ನೀಡಿ ಗೌರವಿಸಲಾಗುವುದು.
2. 1ನೇ ತರಗತಿಯಿಂದ 4ನೇ ತರಗತಿವರೆಗೆ 85% ಮತ್ತು ಅದಕ್ಕಿಂತ ಹೆಚ್ಚು, 5ನೆಯ ತರಗತಿಯಿಂದ 9ನೆಯ ತರಗತಿಯವರೆಗೆ 80% ಮತ್ತು ಅದಕ್ಕಿಂತ ಹೆಚ್ಚು ಅಂಕ ಪಡೆದವರಿಗೆ.
3. ಎಸ್. ಎಸ್. ಸಿ. (S.S.C.) ಯಲ್ಲಿ 75% ಮತ್ತು ಅದಕ್ಕಿಂತ ಹೆಚ್ಚು ಅಂಕ ಪಡೆದವರಿಗೆ
4. ಎಚ್.ಎಸ್.ಸಿ (H.S.C) ವಿಜ್ಞಾನದಲ್ಲಿ (Science) 70% ಮತ್ತು ಅದಕ್ಕಿಂತ ಹೆಚ್ಚು, ವಾಣಿಜ್ಯ (Commerce)ದಲ್ಲಿ 65% ಮತ್ತು ಅದಕ್ಕಿಂತ ಹೆಚ್ಚು, ಕಲೆ (Arts) ಯಲ್ಲಿ 60% ಮತ್ತು ಅದಕ್ಕಿಂತ ಹೆಚ್ಚು ಅಂಕ ಪಡೆದವರಿಗೆ.
5. 60% ಮತ್ತು ಅದಕ್ಕಿಂತ ಹೆಚ್ಚು ಅಂಕ ಪಡೆದ ಪದವೀಧರರಿಗೆ
6. ಉನ್ನತ ಶಿಕ್ಷಣ / ಸ್ನಾತಕೋತ್ತರ (Post Graduation) ಮತ್ತು CA, CMA (ICWA), MBBS, BDS, BE, CS (Company Secretary), LLB, LLM, MBA, MCA ಮುಂತಾದ ವೃತ್ತಿಪರ ಶಿಕ್ಷಣದಲ್ಲಿ (Professional Education) ಉತ್ತೀರ್ಣರಾದವರಿಗೆ.
7. ಮೂರು ವರ್ಷ ಅವಧಿಯ ಡಿಪ್ಲೋಮ (Diploma) ಪರೀಕ್ಷೆಯಲ್ಲಿ ಪಾಸಾದವರು ಪ್ರತಿಭಾ ಪುರಸ್ಕಾರ ಪಡೆಯಲು ಅರ್ಹರಾಗುತ್ತಾರೆ.
8. ರಾತ್ರಿ ಶಾಲೆ (Night School) ಯಲ್ಲಿ ಕಲಿತು ಹತ್ತನೆಯ ತರಗತಿ ಮತ್ತು ಅದಕ್ಕಿಂತ ಮೇಲ್ಪಟ್ಟು ಪ್ರಥಮ ಪ್ರಯತ್ನ (First Attempt) ದಲ್ಲಿ ಪಾಸಾದ ವಿದ್ಯಾರ್ಥಿಗಳಿಗೆ
9. ಕನ್ನಡ ಮಾಧ್ಯಮದಲ್ಲಿ ಕಲಿತು ಪಾಸಾದವರಿಗೆ ಮೇಲಿನ ಎಲ್ಲಾ ತರಗತಿಗಳಲ್ಲಿ 10% ಅಂಕಗಳ ರಿಯಾಯತಿ ಇದೆ.
10. ಕ್ರೀಡೆ, ಲಲಿತಕಲೆ, ಸಾಹಿತ್ಯ ಮುಂತಾದವುಗಳಲ್ಲಿ ಜಿಲ್ಲಾ ಮಟ್ಟ, ರಾಜ್ಯಮಟ್ಟ, ರಾಷ್ಟ್ರಮಟ್ಟ, ಅಂತಾರಾಷ್ಟ್ರೀಯ ಮಟ್ಟದಲ್ಲಿ ಪ್ರತಿನಿಧಿಸಿದವರಿಗೆ ಪ್ರತಿಭಾ ಪುರಸ್ಕಾರವನ್ನು ನೀಡಿ ಗೌರವಿಸಲಾಗುವುದು.

ಈ ಮೇಲಿನ ವಿಷಯಗಳಲ್ಲಿ ಅರ್ಹತೆ ಪಡೆದ ಪ್ರತಿಭಾಶಾಲಿಗಳು ತಮ್ಮ ಅರ್ಜಿಯನ್ನು ಪರೀಕ್ಷಾ ಫಲಿತಾಂಶದ ದೃಢೀಕರಣ ದಾಖಲೆಗಳೊಂದಿಗೆ ನಿಮ್ಮ ಹತ್ತಿರದಲ್ಲಿರುವ ಆಡಳಿತ ಸಮಿತಿ, ಉಪ ಸಮಿತಿಗಳ ಸದಸ್ಯರ ಅಥವಾ ನೇರವಾಗಿ ಥಾಣೆ ಕಾರ್ಯಾಲಯಕ್ಕೆ ಮಹಾಸಭೆಯ ದಿನ ಅಥವಾ ಅದಕ್ಕೂ ಮುಂಚಿತವಾಗಿ ತಲುಪಿಸಬೇಕಾಗಿ ವಿನಂತಿ.

(ಗಮನಕ್ಕೆ : ನಿಗದಿತ ನಮೂನೆಯ ಅರ್ಜಿಯನ್ನು ತುಂಬಿಸಿ, ಅದರೊಂದಿಗೆ ಅಂಕಪಟ್ಟಿಯನ್ನು ಶಾಲಾ ಮುಖ್ಯೋಪಾಧ್ಯಾಯರು ಅಥವಾ ಕಾಲೇಜಿನ ಪ್ರಾಂಶುಪಾಲರು ದೃಢೀಕರಿಸಬೇಕು)

ವಿ. ಸೂ. :

1. ವಿದ್ಯಾರ್ಥಿ ವೇತನ ಪಡೆಯ ಬಯಸುವ, ಸಮಾಜದ ಆರ್ಥಿಕವಾಗಿ ಹಿಂದುಳಿದ ವಿದ್ಯಾರ್ಥಿಗಳು ಮಹಾಸಭೆ ಜರಗುವ ದಿನ ಅಥವಾ ಮುಂಚಿತವಾಗಿ ನಿಗದಿತ ದಾಖಲೆಗಳೊಂದಿಗೆ ಅರ್ಜಿ ಸಲ್ಲಿಸಬಹುದು.
2. ವಿದ್ಯಾರ್ಥಿ ವೇತನ ಮತ್ತು ಪ್ರತಿಭಾ ಪುರಸ್ಕಾರವನ್ನು ಪಡೆಯಲು ಅರ್ಹ ವಿದ್ಯಾರ್ಥಿಗಳು ಸಂಬಂಧಿತ ಸಭೆಯಲ್ಲಿ ಸ್ವತಃ ಹಾಜರಿರಬೇಕು.
3. ಈ ಮೇಲಿನ ಪ್ರತಿಭಾ ಪುರಸ್ಕಾರ ಮತ್ತು ವಿದ್ಯಾರ್ಥಿ ವೇತನವನ್ನು ನಮ್ಮ ಸಂಘದ ಸದಸ್ಯರಿಗೆ ಮತ್ತು ಅವರ ಮಕ್ಕಳಿಗೆ ಮಾತ್ರ ಸೀಮಿತವಾಗಿರುವುದು.
4. ಅರ್ಜಿ ನಮೂನೆಯು ಸಂಘದ ವೆಬ್‌ಸೈಟ್ : Website : www.billavasevasanghakundapuramumbai.com ನಲ್ಲಿ ಲಭ್ಯವಿರುವುದು.
5. ಅಂಕಪಟ್ಟಿ ದೃಢೀಕರಣ ಆಗದಿದ್ದರೆ ಅಥವಾ ಅರ್ಜಿಯನ್ನು ನಿಗದಿತ ನಮೂನೆಯಲ್ಲಿ ತುಂಬಿಸದಿದ್ದಲ್ಲಿ ಅರ್ಜಿಯನ್ನು ವಿದ್ಯಾರ್ಥಿ ವೇತನ ಮತ್ತು ಪ್ರತಿಭಾ ಪುರಸ್ಕಾರಕ್ಕೆ ಪರಿಗಣಿಸಲಾಗುವುದಿಲ್ಲ.
6. ಅರ್ಜಿಯನ್ನು ಪರಿಗಣಿಸುವಲ್ಲಿ ಆಡಳಿತ ಸಮಿತಿಯ ತೀರ್ಮಾನವೇ ಅಂತಿಮವಾಗಿರುತ್ತದೆ.

★ ವಿದ್ಯಾರ್ಥಿವೇತನ ವ ಪ್ರತಿಭಾ ಪುರಸ್ಕಾರದ ಹೆಚ್ಚಿನ ಮಾಹಿತಿಗಾಗಿ ಆಡಳಿತ ಮಂಡಳಿ ಅಥವಾ ಉಪಸಮಿತಿಗಳ ಸದಸ್ಯರನ್ನು ಸಂಪರ್ಕಿಸಬಹುದು.

ಬಿಲ್ಲವ ಸೇವಾ ಸಂಘ ಕುಂದಾಪುರ (ರಿ.) ಮುಂಬಯಿ

2025-26ರ ಆಡಳಿತ ಸಮಿತಿಯ ಪದಾಧಿಕಾರಿಗಳು



ಸುರೇಶ್ ಎಸ್. ಪೂಜಾರಿ
(ಗೌರವಾಧ್ಯಕ್ಷರು - 4.6.2025 ರವರೆಗೆ)



ಮಂಜುನಾಥ ಎ. ಬಿಲ್ಲವ
(ಗೌರವಾಧ್ಯಕ್ಷರು - 10.11.2025 ರಿಂದ)



ಸಿ. ಎ. ಪೂಜಾರಿ
(ಅಧ್ಯಕ್ಷರು)



ಎಸ್. ಕೆ. ಪೂಜಾರಿ
(ಉಪಾಧ್ಯಕ್ಷರು)



ಬೇಬಿ ರಂಗ ಪೂಜಾರಿ
(ಉಪಾಧ್ಯಕ್ಷೆ)



ಸುಧಾಕರ ಸಿ. ಪೂಜಾರಿ
(ಗೌ. ಪ್ರ. ಕಾರ್ಯದರ್ಶಿ)



ಸದಾನಂದ ಬಿ. ಪೂಜಾರಿ
(ಜೊತೆ ಕಾರ್ಯದರ್ಶಿ)



ಸಂತೋಷ್ ಬಿ. ಪೂಜಾರಿ
(ಜೊತೆ ಕಾರ್ಯದರ್ಶಿ)



ಭಾಸ್ಕರ ಕೆ. ಪೂಜಾರಿ
(ಗೌ. ಕೋಶಾಧಿಕಾರಿ - 5.7.2025ರ ವರೆಗೆ, 6.7.2025ರಿಂದ ಸಮಿತಿ ಸದಸ್ಯ)



ರಾಜಶ್ರೀ ಪಿ. ಸಾಲ್ಯಾನ್
(ಗೌ. ಕೋಶಾಧಿಕಾರಿ - 6.7.2025 ರಿಂದ)



ಗೋಪಾಲ ಎಸ್. ಪೂಜಾರಿ
(ಜೊತೆ ಕೋಶಾಧಿಕಾರಿ)



ಜಯಶ್ರೀ ಎ. ಕೋಡಿ
(ಜೊತೆ ಕೋಶಾಧಿಕಾರಿ 6.4.2025 ರ ವರೆಗೆ)



ಹರ್ಷದಾ ಎಚ್. ಹೊಕ್ಕೋಳಿ
(ಜೊತೆ ಕೋಶಾಧಿಕಾರಿ - 7.4.2025 ರಿಂದ)



ಪ್ರಭಾಕರ ಪೂಜಾರಿ ಆಲೂರು
(SNGE&C Trust, Kundapura ಮುಂಬಯಿ ಪ್ರತಿನಿಧಿ ಮತ್ತು ಸಮಿತಿ ಸದಸ್ಯರಾಗಿ 10.8.2025ರ ವರೆಗೆ)

ಬಿಲ್ಲವ ಸೇವಾ ಸಂಘ ಕುಂದಾಪುರ (ರಿ.) ಮುಂಬಯಿ

2025-26ರ ಆಡಳಿತ ಸಮಿತಿಯ ಸದಸ್ಯರುಗಳು



ಎಸ್. ಟಿ. ಪೂಜಾರಿ



ನಾಗೇಶ್ ಆರ್. ಬಿಲ್ಲವ



ಅಶೋಕ್ ಎಂ. ಪೂಜಾರಿ



ರಘು ಎನ್. ಪೂಜಾರಿ



ಸುಶೀಲಾ ಎಸ್. ಪೂಜಾರಿ



ಶಾರದಾ ಬಾಬು ಪೂಜಾರಿ



ಉದಯ ಕೆ. ಪೂಜಾರಿ



ರವೀಂದ್ರ ಎನ್. ಪೂಜಾರಿ



ಮಂಜುನಾಥ ಎ. ಬಿಲ್ಲವ
(9.11.2025ರ ವರೆಗೆ)



ಹರೇಶ್ ಕೆ. ಹೊಕ್ಕೋಳಿ
(6.4.2025 ರ ತನಕ)



ಗೋಪಾಲ ಎನ್. ಪೂಜಾರಿ
(4.5.2025ರ ತನಕ)



ಸುಧಾಕರ ಪಿ. ಆಲೂರು
(10.8.2025 ರಿಂದ)



ಸಂಜೀವ ಎ. ಪೂಜಾರಿ
(7.12.2025 ರಿಂದ)



ಶಂಕರ ಎಂ. ಪೂಜಾರಿ
(7.12.2025 ರಿಂದ)

ಬಿಲ್ಲವ ಸೇವಾ ಸಂಘ ಕುಂದಾಪುರ (ರಿ.) ಮುಂಬಯಿ

2025-26ರ ಉಪ ಸಮಿತಿಗಳು

❖ ಮಹಿಳಾ ಸಂಪದದ ಪದಾಧಿಕಾರಿಗಳು ಮತ್ತು ಸದಸ್ಯೆಯರು ❖

ಗೌರವ ಕಾರ್ಯಾಧ್ಯಕ್ಷೆ : ಶ್ರೀಮತಿ ಸಂತೋಷಿ ಸುರೇಶ್ ಪೂಜಾರಿ (07.05.2026ರ ವರೆಗೆ)
ಕಾರ್ಯಾಧ್ಯಕ್ಷೆ : ಶ್ರೀಮತಿ ಸುಶೀಲ ಸುರೇಶ್ ಪೂಜಾರಿ
ಉಪ ಕಾರ್ಯಾಧ್ಯಕ್ಷೆಯರು : ಶ್ರೀಮತಿ ಗಿರಿಜಾ ಕೆ. ಹೊಕ್ಕೋಳಿ ಮತ್ತು ಶ್ರೀಮತಿ ಸುಮತಿ ಎಸ್. ಪೂಜಾರಿ
ಕಾರ್ಯದರ್ಶಿ : ಶ್ರೀಮತಿ ಶಾರದಾ ಬಿ. ಪೂಜಾರಿ
ಜೊತೆ ಕಾರ್ಯದರ್ಶಿಗಳು : ಶ್ರೀಮತಿ ವಿಮಲ ಎಸ್. ಪೂಜಾರಿ ಮತ್ತು ಶ್ರೀಮತಿ ಸುಜಾತ ಪಿ. ಪೂಜಾರಿ

❖ ಸದಸ್ಯೆಯರು ❖

ಶ್ರೀಮತಿ ವಿಶಾಲಾಕ್ಷಿ ಸಿ. ಪೂಜಾರಿ, ಶ್ರೀಮತಿ ಸುಗಂಧ ಎಸ್. ಪೂಜಾರಿ, ಶ್ರೀಮತಿ ರಾಜಶ್ರೀ ಪಿ. ಸಾಲಿಯಾನ್
ಶ್ರೀಮತಿ ಲಲಿತಾ ಎನ್. ಬಿಲ್ಲವ, ಶ್ರೀಮತಿ ಕಮಲ ಎಂ. ಬಿಲ್ಲವ, ಶ್ರೀಮತಿ ಡಿಂಪಲ್ ಅಮಿತ್ ಕುಮಾರ್
ಶ್ರೀಮತಿ ನೇತ್ರಾವತಿ ಆರ್. ಪೂಜಾರಿ, ಶ್ರೀಮತಿ ಶೋಭಾ ಎ. ಪೂಜಾರಿ, ಶ್ರೀಮತಿ ಆಶಾ ಜಿ. ಪೂಜಾರಿ
ಶ್ರೀಮತಿ ಯಶೋಧಾ ಆರ್. ಪೂಜಾರಿ, ಶ್ರೀಮತಿ ಮನಿಷಾ ಎಸ್. ಪೂಜಾರಿ

❖ ಯುವ ಸಂಪದ ಪದಾಧಿಕಾರಿಗಳು ಮತ್ತು ಸದಸ್ಯರು ❖

ಕಾರ್ಯಾಧ್ಯಕ್ಷ : ಉದಯ ಕೆ. ಪೂಜಾರಿ
ಉಪ ಕಾರ್ಯಾಧ್ಯಕ್ಷರು : ನಾಗರಾಜ ಬಿ. ಪೂಜಾರಿ ಮತ್ತು ನವೀನ್ ಕೆ. ಪೂಜಾರಿ
ಕಾರ್ಯದರ್ಶಿ : ಶಶಿರಾಜ್ ಎ. ಪೂಜಾರಿ
ಜೊತೆ ಕಾರ್ಯದರ್ಶಿಗಳು : ನಾಗರಾಜ ಸಿ. ಪೂಜಾರಿ ಮತ್ತು ದೀಕ್ಷಿತಾ ಜಿ. ಪೂಜಾರಿ

❖ ಸದಸ್ಯರುಗಳು ❖

ಜಯಶ್ರೀ ಎ. ಕೋಡಿ, ಧನರಾಜ್ ಎಚ್. ಪೂಜಾರಿ, ಪಾಂಡುರಂಗ ಎಂ. ಪೂಜಾರಿ
ಶರಣ್ ಎಸ್. ಪೂಜಾರಿ, ಶಿವಾನಿ ಎನ್. ಪೂಜಾರಿ, ಸುರೇಶ್ ಎನ್. ಪೂಜಾರಿ
ಹರ್ಷದಾ ಎಚ್. ಹೊಕ್ಕೋಳಿ, ರಕ್ಷಿತಾ ಜಿ. ಪೂಜಾರಿ, ಹರ್ಷದಾ ಎನ್. ಪೂಜಾರಿ
ಸ್ವಪ್ನಾ ಎಸ್. ಪೂಜಾರಿ, ಭಾಸ್ಕರ ಎಸ್. ಪೂಜಾರಿ, ಅನಿಲ್ ಎ. ಪೂಜಾರಿ
ಪೃಥ್ವೀಶ್ ಎಸ್. ಪೂಜಾರಿ

❖ ಧಾರ್ಮಿಕ ಸಮಿತಿ – ಪದಾಧಿಕಾರಿಗಳು ಮತ್ತು ಸದಸ್ಯರು ❖

ಕಾರ್ಯಾಧ್ಯಕ್ಷ : ಅಶೋಕ್ ಎಂ. ಪೂಜಾರಿ
ಉಪ ಕಾರ್ಯಾಧ್ಯಕ್ಷರು : ಬಾಬು ಎ. ಪೂಜಾರಿ ಮತ್ತು ಶೇಖರ್ ಎನ್. ಬಿಲ್ಲವ
ಕಾರ್ಯದರ್ಶಿ : ಹರೇಶ್ ಕೆ. ಹೊಕ್ಕೋಳಿ
ಜೊತೆ ಕಾರ್ಯದರ್ಶಿಗಳು : ರವೀಂದ್ರ ಎನ್. ಪೂಜಾರಿ ಮತ್ತು ರವಿ ಸಿ. ಪೂಜಾರಿ, ಡೊಂಬಿವಲಿ
ಭಜನಾ ಮಂಡಳಿ ಸಂಚಾಲಕರು : ನಾಗರಾಜ ಎಂ. ಪೂಜಾರಿ, ಅಪ್ಪೇಡಿ
ಸಹ ಸಂಚಾಲಕರು : ಸುಧಾಕರ ಪಿ. ಆಲೂರು
ಅರ್ಚಕರು : ಶಂಕರ ಎಂ. ಪೂಜಾರಿ

ಸದಸ್ಯರು : ಗಿರಿಜಾ ಕೆ. ಹೊಕ್ಕೋಳಿ, ನಾರಾಯಣ ಎನ್. ಪೂಜಾರಿ, ಶಶಿರಾಜ ಎ. ಪೂಜಾರಿ, ಗೋಪಾಲ್ ಎನ್. ಪೂಜಾರಿ, ಕಲ್ಪನಾ ಎಸ್. ಬಿಲ್ಲವ, ನಾಗಿಣಿ ಶ್ರೀಯಾನ್, ಯಶೋಧಾ ಕೆ. ಪೂಜಾರಿ, ಸುಹಾಸ್ ಬಿ. ಪೂಜಾರಿ, ಆನಂದ ಕೆ. ಪೂಜಾರಿ, ದೀಪಾ ಜಿ. ಪೂಜಾರಿ.

ಬಿಲ್ಲವ ಸೇವಾ ಸಂಘ ಕುಂದಾಪುರ (ರಿ) ಮುಂಬಯಿ

38ನೇ ವಾರ್ಷಿಕ ವರದಿ (2025-26)

ಪ್ರಿಯ ಸದಸ್ಯರೇ

ಬಿಲ್ಲವ ಸೇವಾ ಸಂಘ ಕುಂದಾಪುರ (ರಿ) ಮುಂಬಯಿ ಇದರ ಆಡಳಿತ ಸಮಿತಿಗೆ 2025-26ರ 38ನೇ ವಾರ್ಷಿಕ ವರದಿ ಮತ್ತು ಲೆಕ್ಕ ಪರಿಶೋಧಕರಿಂದ ಪರಿಶೀಲಿಸಲ್ಪಟ್ಟ 01-04-2025 ರಿಂದ 31-03-2026ರ ವರೆಗಿನ ಆಯ-ವ್ಯಯ ಪಟ್ಟಿಯನ್ನು ಪ್ರಸ್ತುತ ಪಡಿಸಲು ಸಂತೋಷವಾಗುತ್ತಿದೆ.

37ನೇ ವಾರ್ಷಿಕ ಮಹಾಸಭೆಯ ಸಂಕ್ಷಿಪ್ತ ವರದಿ

ಬಿಲ್ಲವ ಸೇವಾ ಸಂಘ ಕುಂದಾಪುರ (ರಿ) ಮುಂಬಯಿ ಇದರ **37ನೇ ವಾರ್ಷಿಕ ಮಹಾಸಭೆಯನ್ನು ದಿನಾಂಕ 19.10.2025ರ ಆದಿತ್ಯವಾರ ಬೆಳಿಗ್ಗೆ 10.30ಕ್ಕೆ** ಸರಿಯಾಗಿ ಮುಂಬಯಿ ಬಜಾರ್ ಗೇಟ್‌ನ ಆರ್ಯ ಸಮಾಜದ ಪ್ರಥಮ ಮಹಡಿಯ ಸಭಾಗೃಹದಲ್ಲಿ ಜರಗಿಸಲಾಯಿತು. ಅಂದಿನ ಮಹಾಸಭೆಯಲ್ಲಿ ಸಂಘದ 119 ಮಂದಿ ಸದಸ್ಯರು ಹಾಜರಿದ್ದರು ಹಾಗೂ ಸಭೆಯ ಅಧ್ಯಕ್ಷತೆಯನ್ನು ಸಂಘದ ಅಧ್ಯಕ್ಷ ಮಾನ್ಯ ಚನ್ನ ಎ. ಪೂಜಾರಿ (ಸಿ.ಎ.ಪೂಜಾರಿ)ಯವರು ನಿರ್ವಹಿಸಿದರು. ಸಭಾವೇದಿಕೆಯಲ್ಲಿ ಆಡಳಿತ ಸಮಿತಿಯ ಪದಾಧಿಕಾರಿಗಳು ಮತ್ತು ಸದಸ್ಯರು ಉಪಸ್ಥಿತರಿದ್ದರು. ಸಭೆಯ ಆರಂಭದಲ್ಲಿ ಸಂಘದ ಆಡಳಿತ ಸಮಿತಿ, ಉಪಸಮಿತಿಗಳ ಪದಾಧಿಕಾರಿಗಳು, ಸದಸ್ಯರು, ಸಂಘದ ಹಿರಿಯ ಸದಸ್ಯರ ಸಹಭಾಗಿತ್ವದಲ್ಲಿ ಬ್ರಹ್ಮಶ್ರೀ ನಾರಾಯಣ ಗುರುದೇವರ ಭಾವಚಿತ್ರಕ್ಕೆ ಹಾರಾರ್ಪಣೆ ಮಾಡಿ, ದೀಪ ಬೆಳಗಿಸಿ ಶ್ರೀಮತಿ ಶಾರದಾ ಬಾಬು ಪೂಜಾರಿ, ಶ್ರೀಮತಿ ಲಲಿತ ನಾಗೇಶ ಬಿಲ್ಲವ ಹಾಗೂ ಶ್ರೀಮತಿ ನೇತ್ರಾವತಿ ರವೀಂದ್ರ ಪೂಜಾರಿಯವರ ಪ್ರಾರ್ಥನೆಯೊಂದಿಗೆ ಸಂಘದ 37ನೇ ವಾರ್ಷಿಕ ಮಹಾಸಭೆಯ ಕಲಾಪಗಳಿಗೆ ಕಾರ್ಯಸೂಚಿ 1ರ ಅನ್ವಯ ಚಾಲನೆ ನೀಡಲಾಯಿತು.

ಕಾರ್ಯಸೂಚಿ 2 - ಸ್ವಾಗತ :

ಬಿಲ್ಲವ ಸೇವಾ ಸಂಘ ಕುಂದಾಪುರ ಮುಂಬಯಿ ಇದರ 37ನೇ ಮಹಾಸಭೆಗೆ ಆಗಮಿಸಿರುವ ಸರ್ವ ಸದಸ್ಯರನ್ನು ಸಂಘದ ಉಪಾಧ್ಯಕ್ಷ ಶ್ರೀ ಎಸ್.ಕೆ. ಪೂಜಾರಿಯವರು ಆದರದಿಂದ ಸ್ವಾಗತಿಸಿದರು.

ಕಾರ್ಯಸೂಚಿ 3 - ಗತ ಮಹಾಸಭೆಯ ವರದಿ ವಾಚನ ಮತ್ತು ಅಂಗೀಕಾರ :

ಸಂಘದ 36ನೇ (ಗತ) ವಾರ್ಷಿಕ ಮಹಾಸಭೆಯ ವರದಿಯನ್ನು ಸಂಘದ ಜೊತೆ ಕಾರ್ಯದರ್ಶಿ ಶ್ರೀ ಸಂತೋಷ್ ಬಿ. ಪೂಜಾರಿಯವರು ಓದಿ ಹೇಳಿದರು. ವರದಿಯು ಸೂಕ್ತ ತಿದ್ದುಪಡಿಯೊಂದಿಗೆ ಸದಸ್ಯರುಗಳ ಸಂಪೂರ್ಣ ಮಂಜೂರಾತಿಯನ್ನು ಪಡೆಯಿತು. ಅದನ್ನು ಶ್ರೀ ರಂಗ ಎಸ್. ಪೂಜಾರಿಯವರು ಸೂಚಿಸಿ ಮತ್ತು ಶ್ರೀಮತಿ ಸುಗಂಧಾ ಸದಾನಂದ ಪೂಜಾರಿಯವರು ಅನುಮೋದಿಸಿದರು.

ಕಾರ್ಯಸೂಚಿ 4 - ಪ್ರಸಕ್ತ ಸಾಲಿನ ವಾರ್ಷಿಕ ಚಟುವಟಿಕೆಗಳ ಸಂಕ್ಷಿಪ್ತ ವರದಿ :

ಬಿಲ್ಲವ ಸೇವಾ ಸಂಘ ಕುಂದಾಪುರ (ರಿ) ಮುಂಬಯಿ ಇದರ 2024-25ರ ಪ್ರಸಕ್ತ ಸಾಲಿನ ವಾರ್ಷಿಕ ಚಟುವಟಿಕೆಗಳ ಸಂಕ್ಷಿಪ್ತ ವರದಿಯನ್ನು ಸಂಘದ ಗೌರವ ಪ್ರಧಾನ ಕಾರ್ಯದರ್ಶಿ ಶ್ರೀ ಸುಧಾಕರ ಸಿ. ಪೂಜಾರಿಯವರು ಸದನದಲ್ಲಿ ಸಾದರಪಡಿಸಿದರು ಹಾಗೂ ವರದಿಯು ಸದನದ ಸರ್ವ ಸದಸ್ಯರ ಮೆಚ್ಚುಗೆ ಪಡೆಯಿತು.

ಕಾರ್ಯಸೂಚಿ 5 - ಲೆಕ್ಕಪರಿಶೋಧಕರಿಂದ ಪರಿಶೋಧಿಸಲ್ಪಟ್ಟ ಸಂಘದ 2024-25ರ ಸಾಲಿನ ವಾರ್ಷಿಕ ಲೆಕ್ಕಪತ್ರಗಳ ಮಂಡನೆ ಮತ್ತು ಅಂಗೀಕಾರ :

ಸಂಘದ 2024-25ರ ಲೆಕ್ಕ ಪರಿಶೋಧಕರಿಂದ ಪರಿಶೋಧಿಸಲ್ಪಟ್ಟ ವಾರ್ಷಿಕ ಲೆಕ್ಕಪತ್ರಗಳನ್ನು ಸಂಘದ ಗೌ. ಕೋಶಾಧಿಕಾರಿ ಶ್ರೀ ಭಾಸ್ಕರ ಕೆ. ಪೂಜಾರಿಯವರು ಸದನದಲ್ಲಿ ಮಂಡಿಸಿದರು. ಲೆಕ್ಕ ಪತ್ರಗಳು ಮಹಾಸಭೆಯ ಸಂಪೂರ್ಣ ಮಂಜೂರಾತಿಯನ್ನು ಪಡೆಯಿತು. ಇದನ್ನು ಶ್ರೀಯುತ ಕೆ. ಡಿ. ಪೂಜಾರಿಯವರು ಸೂಚಿಸಿ ಹಾಗೂ ಶ್ರೀಮತಿ ವಿಮಲಾ ಸುಧಾಕರ ಪೂಜಾರಿಯವರು ಅನುಮೋದಿಸಿದರು.

2024-26ರ ಕಾಲಾವಧಿಗೆ ಅಧಿಕೃತ ಲೆಕ್ಕಪರಿಶೋಧಕರನ್ನು ಮತ್ತು ಆಂತರಿಕ ಲೆಕ್ಕಪರಿಶೋಧಕರನ್ನು ಆಯ್ಕೆ ಮಾಡುವ ಕಾರ್ಯಸೂಚಿ ಬಂದಾಗ, ಮಹಾಸಭೆಯಲ್ಲಿ ಈ ಬಗ್ಗೆ ಚರ್ಚೆ ನಡೆಸಿ ಅದನ್ನು ಮುಂಬರುವ ಆಡಳಿತ ಸಮಿತಿಯು ನೇಮಿಸಿಕೊಳ್ಳುವುದು ಉತ್ತಮ ಎಂದು ಸದನವು ಅಭಿಪ್ರಾಯ ಪಟ್ಟಿತು. ಇದನ್ನು ಮಾಜಿ ಕಾರ್ಯದರ್ಶಿ ಶಂಕರ ಎಂ. ಪೂಜಾರಿ ಸೂಚಿಸಿ, ಸುಗಂಧಾ ಎಸ್. ಪೂಜಾರಿಯವರು ಅನುಮೋದಿಸಿದರು.

ಕಾರ್ಯಸೂಚಿ 6 - ಸದಸ್ಯರಿಂದ ಬಂದ ಅಹವಾಲುಗಳು ಮತ್ತು ಅನಿಸಿಕೆ ಅಭಿಪ್ರಾಯಗಳು :

ಸದಸ್ಯರು ಲೆಕ್ಕ ಪತ್ರ, ಅಯ-ವ್ಯಯ ಪಟ್ಟಿ ಮತ್ತು ನಿಕಟಪೂರ್ವ ಸಮಿತಿಯವರು ತೆಗೆದುಕೊಂಡ ಕೆಲವು ನಿರ್ಣಯಗಳ ಬಗ್ಗೆ ಪ್ರಶ್ನೆಗಳನ್ನು ಕೇಳಿದ್ದಾರೆ.

ಗೌ. ಕೋಶಾಧಿಕಾರಿ ಭಾಸ್ಕರ ಕೆ. ಪೂಜಾರಿಯವರು ಲೆಕ್ಕ ಪತ್ರಗಳ ಬಗ್ಗೆ ಸದಸ್ಯರು ಕೇಳಿದ ಪ್ರಶ್ನೆಗಳಿಗೆ ಸಮರ್ಪಕವಾಗಿ ಉತ್ತರಿಸಿದರು.

ಸಂಘದ 2024-25ರ ಸಾಲಿನ ವಾರ್ಷಿಕ ವರದಿಯ ನಿಯಮಾನುಸಾರ ಕೇಳಿದ ಅಹವಾಲುಗಳಿಗೆ ಸಂಘದ ಮಾಜಿ ಕಾರ್ಯದರ್ಶಿ ಶ್ರೀ ಶಂಕರ ಎಮ್.ಪೂಜಾರಿಯವರು ಒಂಭತ್ತು ಪ್ರಶ್ನೆಗಳನ್ನು ಬರೆದಿದ್ದರು. ಅವರ ಪ್ರಶ್ನೆಗಳು ನಿಕಟಪೂರ್ವ ಸಮಿತಿಯ ವ್ಯವಹಾರಗಳಿಗೆ ಮತ್ತು ನಿರ್ಣಯಗಳಿಗೆ ಸಂಬಂಧಪಟ್ಟಿದ್ದ ಕಾರಣ ಅದನ್ನು ನಿಕಟಪೂರ್ವ ಸಮಿತಿಯವರು ಉತ್ತರಿಸಬೇಕು; ನಾವು ಉತ್ತರಿಸುವುದು ಸಮಂಜಸವಲ್ಲ ಎಂದು ಗೌ.ಪ್ರ. ಕಾರ್ಯದರ್ಶಿ ಶ್ರೀ ಸುಧಾಕರ ಸಿ. ಪೂಜಾರಿಯವರು ಸಭೆಗೆ ತಿಳಿಸಿದರು.

ಸದಸ್ಯರಾದ ಶ್ರೀ ರತ್ನಾಕರ ಪೂಜಾರಿ, ಗರಡಿಮನೆಯವರು ತಮ್ಮ ಪತ್ರದಲ್ಲಿ ಸಂಘದ ಸ್ಥಿರ ಆಸ್ತಿಗಳನ್ನು ಮಾರಾಟ ಮಾಡುವಾಗ ಮತ್ತು ಹೊಸ ಆಸ್ತಿಯನ್ನು ಖರೀದಿ ಮಾಡುವಾಗ ಚಾರಿಟಿ ಕಮಿಷನರಿಗೆ ತಿಳಿಸಿದ್ದೀರಾ ಮತ್ತು ಎರಡೂ ಸಮಯದಲ್ಲಿ ಮೌಲ್ಯ ಮಾಪನ ವರದಿ (ವ್ಯಾಲ್ಯುವೇಶನ್ ರಿಪೋರ್ಟ್) ಯನ್ನು ಪಡೆದಿದ್ದರೇ? ಎಂದು ಪ್ರಶ್ನಿಸಿ, ಸಂಬಂಧಪಟ್ಟ ದಾಖಲೆಗಳನ್ನು ಸಭೆಯಲ್ಲಿ ಮಂಡಿಸಬೇಕು, ಅಲ್ಲದೇ ಹೀಗೆ ಶ್ರೀ ರತ್ನಾಕರ ಪೂಜಾರಿಯವರು ವಿವಿಧ ವಿಷಯಗಳ ಕುರಿತಾದ ಏಳು ಪ್ರಶ್ನೆಗಳನ್ನು ಬರೆದಿದ್ದರು.

ಅದಕ್ಕೆ ಗೌ. ಪ್ರ. ಕಾರ್ಯದರ್ಶಿಯವರು ಆಸ್ತಿ ಮಾರಾಟ ಸಮಯದಲ್ಲಿ ನಿಕಟಪೂರ್ವ ಸಮಿತಿಯವರು ಚಾರಿಟಿ ಕಮಿಷನರಿಗೆ ತಿಳಿಸಿದಂತ ಯಾವುದೇ ದಾಖಲೆಗಳು ಕಂಡುಬರುವುದಿಲ್ಲ. ಅಲ್ಲದೇ ಮಾರಾಟ ಹಾಗೂ ಖರೀದಿ ಸಮಯದಲ್ಲಿ ಯಾವುದೇ ಮೌಲ್ಯಮಾಪನ ವರದಿ ಪಡೆದುದಕ್ಕೆ ಸ್ಪಷ್ಟೀಕರಣ ಕಂಡು ಬರುವುದಿಲ್ಲ ಎಂದು ಸಂಕ್ಷಿಪ್ತದಲ್ಲಿ ಉತ್ತರ ನೀಡಿದರು. ಗೌ. ಪ್ರ. ಕಾರ್ಯದರ್ಶಿಯವರು ಸಂಘದ ನಿಕಟಪೂರ್ವ ಆಡಳಿತ ಸಮಿತಿ ಅಧ್ಯಕ್ಷ ಶ್ರೀ ಸೂರ್ಯ ಎಸ್. ಪೂಜಾರಿ, ಕಾರ್ಯದರ್ಶಿ ಶ್ರೀ ಅಶೋಕ ಎನ್. ಪೂಜಾರಿ ಮತ್ತು ಸದಸ್ಯ ಶ್ರೀ ಲಕ್ಷ್ಮಣ ಎನ್. ಪೂಜಾರಿಯವರು ಗತ ಮಹಾಸಭೆಯ ವರದಿ, ಲೆಕ್ಕಪತ್ರಗಳ ಬಗ್ಗೆ ಅಲ್ಲದೇ ವರದಿ ವರ್ಷದ ಕಾರ್ಯಚಟುವಟಿಕೆಗಳ ಬಗ್ಗೆ ಪ್ರತ್ಯೇಕವಾಗಿ ಬರೆದ 20 - 22 ಪ್ರಶ್ನೆಗಳಿಗೆ, ಅವರಿಗೆ ಪ್ರತ್ಯೇಕವಾಗಿ ಸಮರ್ಪಕವಾಗಿ ಉತ್ತರ ಬರೆದು ಕಳುಹಿಸಲಾಗಿದೆ ಎಂದು ಸಭೆಗೆ ತಿಳಿಸಿದರು.

ಆದರೂ ಮತ್ತೆ ಮತ್ತೆ ಅದೇ ಪ್ರಶ್ನೆಗಳನ್ನು ಎತ್ತಿ ಮರು ಸವಾಲು ಕೇಳಿದಾಗ ಮಾಜಿ ಅಧ್ಯಕ್ಷ ಮಾನ್ಯ ಮಂಜುನಾಥ ಎ. ಬಿಲ್ಲವರು ನೇರವಾಗಿ ಉತ್ತರ ಕೊಡಲು ಮಾತಿಗೆ ನಿಂತಾಗ ಕೆಲವರು ಅವರ ಮಾತನ್ನು ತಡೆಯಲು ಪ್ರಯತ್ನಿಸಿದಾಗ ಮಾತಿಗೆ ಮಾತು ಬೆಳೆಯಲಾರಂಭಿಸಿತು. ಆಗ ಅಧ್ಯಕ್ಷ ಶ್ರೀ ಸಿ.ಎ. ಪೂಜಾರಿಯವರು ಪೂರ್ಣ ವರ್ಷದ ಕಾರ್ಯ ಚಟುವಟಿಕೆಗಳ ಖರ್ಚುವೆಚ್ಚಗಳ ರಶೀದಿ ಮತ್ತು ವೋಚರುಗಳು ಸಾವಿರಾರು ಇವೆ. ಅದನ್ನೆಲ್ಲಾ ಇಲ್ಲಿ ತಂದು ತೋರಿಸಲು ಸಾಧ್ಯವಿಲ್ಲ. ನೀವು ಗತ ಮಹಾಸಭೆ ವರದಿ ಮತ್ತು ಲೆಕ್ಕಪತ್ರಗಳ ಬಗ್ಗೆ ಮಾತ್ರ ಪ್ರಶ್ನೆ ಕೇಳಬೇಕಾಗಿತ್ತು. ಆದರೂ ತೊಂದರೆ ಇಲ್ಲ ನೀವು ಪೂರ್ವ ಸೂಚನೆ ನೀಡಿ ಸಂಘದ ಕಚೇರಿಗೆ ಬನ್ನಿ, ನೀವು ಕೇಳಿದ ಎಲ್ಲಾ ದಾಖಲೆಗಳನ್ನು ತೋರಿಸುತ್ತೇವೆ ಎಂದು ಉತ್ತರ ನೀಡಿದರು.

ಆಗ ಸಂಘದ ಮಾಜಿ ಅಧ್ಯಕ್ಷ ಮಾನ್ಯ ಕೆ. ಡಿ. ಪೂಜಾರಿಯವರು ಮಾತನಾಡುತ್ತ ಸಂಘದಲ್ಲಿ ಇಷ್ಟು ವರ್ಷ ಸೇವೆ ಸಲ್ಲಿಸಿದ ನೀವು ಈಗ ಸಂಘದ ಹೊಸ ಆಡಳಿತ ಸಮಿತಿಯ ವಿರುದ್ಧ ವಿನಾಕಾರಣ ಪ್ರಶ್ನೆ ಮಾಡುವದು ಸರಿಯಲ್ಲ. ಅದು ನಿಮಗೆ ಶೋಭೆ ತರುವಂತಹದ್ದಲ್ಲ. ನೂತನವಾಗಿ ಅಧಿಕಾರ ಪಿಡಿದಿರುವ ಆಡಳಿತ ಸಮಿತಿಗೆ ಬೆಂಬಲ ನೀಡಿ ಪ್ರೋತ್ಸಾಹಿಸಬೇಕು. ಅವಕಾಶ ಎಲ್ಲರಿಗೂ ಸಿಗಬೇಕು ನಿರಂತರವಾಗಿ ಒಂದೇ ಸಮಿತಿ ಯಾವ ಸಂಘದಲ್ಲೂ ಆಡಳಿತ ನಡೆಸುವುದು ಉತ್ತಮ ಬೆಳವಣಿಗೆಯಲ್ಲ. ದಯವಿಟ್ಟು ಸದನದ ಗೌರವವನ್ನು ಕಾಪಾಡಿ ಎಂದು ವಿನಂತಿಸಿಕೊಂಡರು.

ಅದೇ ಸಂದರ್ಭದಲ್ಲಿ ಸಂಘದ ಹಿರಿಯ ಸದಸ್ಯರಲ್ಲಿ ಒಬ್ಬರಾದ ಶ್ರೀ ಕರುಣಾಕರ ಪೂಜಾರಿಯವರು ಮಾತನಾಡುತ್ತ ಸಂಘವು ಎಲ್ಲ ಸದಸ್ಯರಿಗೂ ಸಮಾನ ವೇದಿಕೆಯಾಗಿದೆ. ಇಲ್ಲಿ ಅವರು ಇವರು, ಮೇಲು ಕೀಳು ಎಂಬ ಭೇದ ಭಾವ ಇರುವುದಿಲ್ಲ. ಎಲ್ಲರೂ ಸಮಾನ ಚಿಂತನೆಯಿಂದ ಸಂಘದ ಹಿತದೃಷ್ಟಿಯನ್ನು ಗಮನದಲ್ಲಿ ಇಟ್ಟುಕೊಂಡು ಮಾತಾಡಬೇಕು. ಚರ್ಚೆ ಮಾಡಬೇಕು. ವಾದ ವಿವಾದಕ್ಕೆ ಹಾಗೂ ಘರ್ಷಣೆಯಾಗುವಂತಹ ವಿವಾದಾತ್ಮಕ ಹೇಳಿಕೆಗಳನ್ನು ಯಾರೂ ಮಾಡಬಾರದು; ಅಲ್ಲದೇ ಕಾರ್ಯಸೂಚಿಯಲ್ಲಿ ಇರುವ ವಿಷಯದ ಬಗ್ಗೆ ಮಾತ್ರ ಚರ್ಚೆ ಮಾಡಬೇಕು ಮತ್ತು ವೈಯಕ್ತಿಕ ವಿಷಯಗಳನ್ನು ಇಲ್ಲಿ ಚರ್ಚಿಸಬಾರದು ಎಂದು ವಿನಂತಿಸಿಕೊಂಡರು.

ಆಗ ಗೌ. ಕೋಶಾಧಿಕಾರಿ ಶ್ರೀ ಭಾಸ್ಕರ ಕೆ. ಪೂಜಾರಿಯವರು ನಿಕಟಪೂರ್ವ ಸಮಿತಿಯ ಕಾರ್ಯದರ್ಶಿ ಶ್ರೀ ಅಶೋಕ ಎನ್.ಪೂಜಾರಿಯವರು ಸಂಘದ ಅಧಿಕೃತ ಇ-ಮೇಲ್, ಟ್ಯಾಲಿ ಪ್ಯಾಕೇಜನ ಪಾಸ್-ವರ್ಡ್ ಹಾಗೂ ಇನ್ನಿತರ ಕೆಲವೊಂದು ದಾಖಲೆಗಳನ್ನು ಸಂಘಕ್ಕೆ ಸಲ್ಲಿಸದೆ ತಮ್ಮಲ್ಲಿಯೇ ಇಟ್ಟುಕೊಂಡಿದ್ದು, ಸಂಘದ ದೈನಂದಿನ ಕೆಲಸಗಳಿಗೆ ತೊಂದರೆಯಾಗುತ್ತಿದ್ದರಿಂದ, ನಾನು ಅವರಿಗೆ ಫೋನ್ ಮುಖಾಂತರ ಸಂಪರ್ಕಿಸಿ ವಿನಂತಿಸಿದಾಗ, ಪ್ರಥಮವಾಗಿ ತನ್ನಲ್ಲಿ ದಾಖಲೆಗಳು ಇಲ್ಲ ಎಂದು ನಿರಾಕರಿಸಿದರು. ನಂತರ ಕೆಲವು ಸದಸ್ಯರುಗಳನ್ನು ಆಡಳಿತ ಸಮಿತಿಯಿಂದ ಹೊರಹಾಕುವ ಶರತ್ತುಗಳಿಗೆ ಒಪ್ಪುವುದಾದರೆ ಮಾತ್ರ ನೀಡುವುದಾಗಿ ಹೇಳಿರುವುದಾಗಿ ಸದನದಲ್ಲಿ ಹೇಳಿದರು.

ಆಗ ಸಭೆಯಲ್ಲಿದ್ದ ಸದಸ್ಯರು ಯಾರನ್ನು ಸಮಿತಿಯಿಂದ ಹೊರಹಾಕಬೇಕು ಎಂದು ಷರತ್ತು ಹಾಕಿದ್ದಾರೆ ಮತ್ತು ಅವರ ಹೆಸರು ಹೇಳಿ ಎಂದು ಒತ್ತಾಯಿಸಿದಾಗ, ಭಾಸ್ಕರ ಪೂಜಾರಿಯವರು ಶ್ರೀ ಮಂಜುನಾಥ ಎ. ಬಿಲ್ಲವ, ಶ್ರೀಮತಿ ಬೇಬಿ ರಂಗ ಪೂಜಾರಿ ಮತ್ತು ಶ್ರೀ ಶಂಕರ ಎಂ. ಪೂಜಾರಿಯವರನ್ನು ಸಮಿತಿಯಿಂದ ಕೈಬಿಡಲು ಷರತ್ತು ವಿಧಿಸಿದ್ದಾರೆ ಎಂದು ಸದನಕ್ಕೆ ತಿಳಿಸಿದರು.

ಆಗ ಅಶೋಕ ಎನ್. ಪೂಜಾರಿಯವರು ತನ್ನ ಹತ್ತಿರ ದಾಖಲೆಗಳು ಇಲ್ಲ, ಹುಡುಕಿ ಸಿಕ್ಕಿದರೆ ಕೊಡುತ್ತೇನೆ ಅಂತ ಹೇಳಿದ್ದು, ತಾನು ಷರತ್ತು ವಿಧಿಸಿದ ಬಗ್ಗೆ ನಿಮ್ಮ ಹತ್ತಿರ ಯಾವ ಆಧಾರ ಇದೆ? ಎಂದು ಮರುಪ್ರಶ್ನೆ ಹಾಕಿದರು.

ಆಗ ಆಡಳಿತ ಸಮಿತಿ ಮತ್ತು ನಿಕಟಪೂರ್ವ ಆಡಳಿತ ಸಮಿತಿಯ ಸದಸ್ಯರ ನಡುವೆ ತೀವ್ರ ಚರ್ಚೆ ನಡೆಯುತ್ತಿರುವಾಗ, ಸಂಘದ ಹಿರಿಯ ಸದಸ್ಯರಲ್ಲಿ ಒಬ್ಬರಾದ ಶ್ರೀ ಎನ್.ಟಿ. ಪೂಜಾರಿಯವರು ಸದನವನ್ನು ಉದ್ದೇಶಿಸಿ ಮಾತನಾಡುತ್ತಾ,

ಸಂಘದಲ್ಲಿ ನಾವು ಎಲ್ಲರೂ ಮಾಡುವುದು ಸಮಾಜ ಸೇವೆ. ಅಧ್ಯಕ್ಷರಾದವರಿಗೆ ತಾಳ್ಮೆ ಬೇಕು, ಎರಡುವರೆ ಸಾವಿರ ಸದಸ್ಯರ ಮಾತುಗಳನ್ನು ಕೇಳಬೇಕಾಗುತ್ತದೆ. ಕೆಲವು ಹಿರಿಯ ಸದಸ್ಯರಿಗೆ ಸಂಘದ ಈಗಿನ ಪರಿಸ್ಥಿತಿ ಬಗ್ಗೆ ನೋವು ಇದೆ. ಇಲ್ಲಿ ಪ್ರೀತಿ ಸೌಹಾರ್ದತೆ ಇರಬೇಕು. ಹಿಂದಿನ ಆಡಳಿತ ಸಮಿತಿಯವರು ಇಂದು ಸದಸ್ಯರಾಗಿ ಸಭೆಯಲ್ಲಿ ಕುಳಿತಿದ್ದಾರೆ, ಇಂದಿನ ಆಡಳಿತ ಸಮಿತಿಯವರು ಮುಂದೆ ಸದಸ್ಯರಾಗಿ ಕುಳಿತುಕೊಳ್ಳುತ್ತಾರೆ. ಸಂಘದಲ್ಲಿ ಬದಲಾವಣೆ ಬೇಕು. ನಮ್ಮ ನಮ್ಮೊಳಗೆ ಕುಳಿತು ಚರ್ಚೆ ನಡೆಯಬೇಕು, ಸುಮ್ಮನೆ ಗಲಾಟೆಗೆ ಅವಕಾಶ ಆಗಬಾರದು. ಇದರಿಂದ ನಮ್ಮ ಮುಂದಿನ ಪೀಳಿಗೆ ಅಂದರೆ ಯುವ ಸದಸ್ಯರಿಗೆ ತಪ್ಪು ಸಂದೇಶ ಹೋಗುತ್ತದೆ. ನಮ್ಮ ಕುಂದಾಪುರ ಬಿಲ್ಲವರ ಸಂಘಟನೆ ಮುಂಬಯಿ ಮಹಾನಗರದಲ್ಲಿ ಉತ್ತಮ ಹೆಸರು ಗಳಿಸಿರುವ ಸಂಘ; ನಮ್ಮ ಸಂಘದ ಹೆಸರು ಇನ್ನು ಮುಂದಕ್ಕೂ ಉತ್ತಮಗೊಳ್ಳಬೇಕು. ನಿಮ್ಮಲ್ಲಿರುವ ಭಿನ್ನಾಭಿಪ್ರಾಯವನ್ನು ಮಾತುಕತೆಯಿಂದ ಪರಿಹಾರ ಮಾಡಿಕೊಳ್ಳಬೇಕು ಎಂದು ಸಲಹೆ ನೀಡಿದರು.

ಕಾರ್ಯಸೂಚಿ 7 - ಸಂಘದ ನೋಂದಣಿ ಕಚೇರಿಯ ತಕರಾರಿನ ಕುರಿತು ಚರ್ಚೆ ಮತ್ತು ನಿರ್ಣಯ :

ಸಂಘದ ನೋಂದಣಿ ಕಚೇರಿ ಮಾಸ್ಟರ್ ಬಿಲ್ಡಿಂಗ್‌ನ ತಕರಾರಿನ ಬಗ್ಗೆ ಆಡಳಿತ ಸಮಿತಿಯ ಸದಸ್ಯರಾದ ಮಂಜುನಾಥ ಎ ಬಿಲ್ಲವರು ಸದನಕ್ಕೆ ವಿವರಿಸಿ, ಕಳೆದ ಮಹಾಸಭೆಯ ಅನುಮತಿಯಂತೆ ಇತ್ತೀಚೆಗೆ ರಿಪೇರಿ ಕೆಲಸ ನಡೆಯತ್ತಿರುವಾಗ, ಜಾಗದ ಮಾಲಿಕ ಬೀಗ ಹಾಕಿರುವ ಬಗ್ಗೆ ಸಭೆಗೆ ತಿಳಿಸಿದರು. ಪ್ರಾರಂಭದಿಂದಲೂ ಈ ಜಾಗದ ಮುತುವರ್ಜಿ ನೋಡಿಕೊಳ್ಳುತ್ತಿದ್ದ ಮಾಜಿ ಅಧ್ಯಕ್ಷರಾದ ವಕೀಲ ಆನಂದ ಪೂಜಾರಿಯವರನ್ನು ವಿಚಾರಿಸಿದಾಗ, ನಡೆದ ಕಾರ್ಯಗಳ ಬಗ್ಗೆ ಕೂಲಂಕುಷವಾಗಿ ಆಲಿಸಿದ ಅವರು, ನಮ್ಮ ಸಂಘದ ಹೆಸರಿನಲ್ಲಿ ಆ ಜಾಗಕ್ಕೆ ಸಂಬಂಧಿಸಿದ ಯಾವುದೇ ದಾಖಲೆಗಳು ಇಲ್ಲ. ಇಂತಹ ಪರಿಸ್ಥಿತಿಯಲ್ಲಿ ನೀವು ಸಂಘದ ಹೆಸರಿನ ಫಲಕವನ್ನು ಅಳವಡಿಸಿದ್ದು, ಜಾಗದ ಮಾಲೀಕನಿಗೆ ಅವಕಾಶ ನೀಡಿದಂತಾಗಿದೆ. ಆ ಜಾಗದ ಬಾಡಿಗೆ ಕರಾರು ಪತ್ರವು ದಿ. ನಾರಾಯಣ ಸೋಮ ಶ್ರೀಯಾನರವರ ಹೆಸರಿನಲ್ಲಿದ್ದು, ಅವರ ಮಕ್ಕಳ ಸಹಾಯದಿಂದ ಮುಂದಿನ ಕ್ರಮಕೈಗೊಳ್ಳಬೇಕು ಎಂದು ಸಲಹೆ ನೀಡಿದರು. ಈ ಸಲಹೆಯನ್ನು ಮಹಾಸಭೆಯು ಸಮ್ಮತಿಸಿ, ಆಡಳಿತ ಮಂಡಳಿಗೆ ಅದರಂತೆ ಕಾರ್ಯವೆಸಗಲು ಆದೇಶಿಸಿತು. ಈ ನಿರ್ಣಯವನ್ನು ಕೆ. ಡಿ. ಪೂಜಾರಿಯವರು ಸೂಚಿಸಿ ಶಂಕರ ಆರ್. ಪೂಜಾರಿಯವರು ಅನುಮೋದಿಸಿದರು.

ಕಾರ್ಯಸೂಚಿ 8: ಥಾಣೆ ಕಚೇರಿ ಖರೀದಿ ಕರಾರಿನಲ್ಲಿ ಕಂಡು ಬಂದ ವ್ಯತ್ಯಾಸ ಮೊತ್ತದ ಕುರಿತು ಚರ್ಚೆ ಮತ್ತು ನಿರ್ಣಯ :

ಸಂಘದ ಥಾಣೆ ಕಚೇರಿ ಖರೀದಿ ಕರಾರಿನಲ್ಲಿ ಕಂಡು ಬಂದ ವ್ಯತ್ಯಾಸ ಮೊತ್ತ ಅಂದಾಜು ರೂಪಾಯಿ ಆರು ಲಕ್ಷಕ್ಕೂ ಅಧಿಕ ಮೊತ್ತದ ಬಗ್ಗೆ ಆಡಳಿತ ಸಮಿತಿ ಸದಸ್ಯರಾದ ನಾಗೇಶ ಬಿಲ್ಲವರು ಸಭೆಗೆ ವಿವರಿಸಿದರು. ಈ ಬಗ್ಗೆ ಕರಾರಿಗೆ ಸಹಿ ಮಾಡಿರುವ ನಿಕಟಪೂರ್ವ ಸಮಿತಿಯ ಅಧ್ಯಕ್ಷ ಸೂರ್ಯ ಎಸ್. ಪೂಜಾರಿ ಮತ್ತು ಕಾರ್ಯದರ್ಶಿ ಅಶೋಕ ಎನ್. ಪೂಜಾರಿಯವರನ್ನು ವಿಚಾರಿಸಿದಾಗ, ನಮ್ಮ ಲೆಕ್ಕ ಪರಿಶೋಧಕರು ಒಂದು ಕೋಟಿಗಿಂತ ಹೆಚ್ಚು ಮೊತ್ತದ ಕರಾರಿಗೆ ಅಧಿಕ ಮೊತ್ತದ ತೆರಿಗೆ ನೀಡಬೇಕಾಗುತ್ತದೆ ಎಂದು ಸಲಹೆ ನೀಡಿದ್ದರು. ಆದ್ದರಿಂದ ಕರಾರು ಪತ್ರದಲ್ಲಿ ಬದಲಾವಣೆ ಮಾಡಲಾಯಿತು. ಅದರಿಂದಾಗಿ ಕರಾರು ಪತ್ರದಲ್ಲಿ ತಪ್ಪಾಗಿ ಮುದ್ರಿತವಾಗಿದೆ ಎಂದು ತಿಳಿಸಿದರು.

ಆಗ ಶ್ರೀ ಮಂಜುನಾಥ ಎ. ಬಿಲ್ಲವರು ತಪ್ಪಾದ ಬಗ್ಗೆ ನೀವು ಲಿಖಿತ ಪತ್ರ ನೀಡಿ, ನಂತರ ಖರಾರು ಪತ್ರವನ್ನು ಸರಿಪಡಿಸಲು ಪ್ರಯತ್ನಿಸುತ್ತೇವೆ ಎಂದು ಹೇಳಿದರು. ಆಗ ಸದಸ್ಯರಾದ ಶ್ರೀ ರಂಗ ಎಸ್. ಪೂಜಾರಿಯವರು ಆಸ್ತಿ ಮಾರಾಟ ಮಾಡುವಾಗ ಚಾರಿಟಿ ಕಚೇರಿಗೆ ತಿಳಿಸದೇ ಇರುವುದರಿಂದ ಬರುವ ದಂಡದ ಮೊತ್ತವನ್ನು ಬರಿಸಲು ಯಾರು ಹೊಣೆ ಎಂದು ಪ್ರಶ್ನಿಸಿದರು. ಆಗ ಮಾಜಿ ಅಧ್ಯಕ್ಷ ಶ್ರೀ ಆನಂದ ಎಂ. ಪೂಜಾರಿಯವರು ಆ ಸಮಯದಲ್ಲಿ ಸಮಿತಿಯಲ್ಲಿ ಇದ್ದರೂ ಸಹ ಪ್ರಶ್ನೆ ಮಾಡದವರು ಈಗ ಪ್ರಶ್ನೆ ಕೇಳುವುದು ಎಷ್ಟು ಸಮಂಜಸ ಎಂದು ಪ್ರಶ್ನಿಸಿದರು. ಈ ಸಂದರ್ಭದಲ್ಲಿ ಪ್ರಸ್ತುತ

ಮತ್ತು ನಿಕಟಪೂರ್ವ ಸಮಿತಿ ಸದಸ್ಯರ ನಡುವೆ ಪುನಃ ತೀವ್ರ ವಾಗ್ವಾದ ನಡೆಯಿತು. ಆಗ ಮಾಜಿ ಅಧ್ಯಕ್ಷ ವಕೀಲ ಆನಂದ ಎಂ. ಪೂಜಾರಿಯವರು ಸಂಘದ ಥಾಣೆ ಕಚೇರಿಯ ಜಾಗವನ್ನು ಮಾರಿ, ದಂಡವನ್ನು ಕಟ್ಟಿ, ಸಂಘವನ್ನು ಮುಚ್ಚಿ ಎಂದು ಸಲಹೆ ನೀಡಿದರು. ಇದಕ್ಕೆ ಸದಸ್ಯರೆಲ್ಲರೂ ವಿರೋಧ ವ್ಯಕ್ತಪಡಿಸಿದರು.

ಆನಂತರ ಮಂಜುನಾಥ ಎ. ಬಿಲ್ಲವರು ಆಡಳಿತ ಸಮಿತಿಗೆ ನಿಕಟಪೂರ್ವ ಸಮಿತಿಯ ಅಸಹಕಾರದ ಬಗ್ಗೆ ಸಭೆಗೆ ತಿಳಿಸುತ್ತಾ, 1988ರಲ್ಲಿ ಸಂಘಕ್ಕೆ ಪುನರ್ಜನ್ಮ ನೀಡಲು ಕಾರಣೀಭೂತರಾದ ಸಂಘದ ಮಾಜಿ ಗೌರವಾಧ್ಯಕ್ಷರಾದ ದಿ. ಸುರೇಶ್ ಪೂಜಾರಿಯವರ ಶ್ರದ್ಧಾಂಜಲಿ ಸಭೆಗೆ ನಿಕಟಪೂರ್ವ ಸಮಿತಿಯ ಪದಾಧಿಕಾರಿಗಳು ಮತ್ತು ಸದಸ್ಯರು ಗೈರುಹಾಜರಾದ ಬಗ್ಗೆ ಸಭೆಗೆ ತಿಳಿಸಿದರು. ಅಲ್ಲದೇ ನಮ್ಮ ಮಹಿಳೆಯರ ಬಗ್ಗೆ ನಿಕೃಷ್ಟವಾಗಿ ಮಾತನಾಡುವುದು ಎಷ್ಟು ಸಮಂಜಸ ಎಂದು ಹೇಳಿದಾಗ, ನಿಕಟಪೂರ್ವ ಸಮಿತಿಯ ಕೆಲವು ಸದಸ್ಯರು ಆಕ್ಷೇಪ ವ್ಯಕ್ತಪಡಿಸುತ್ತಾ, ಮಾಜಿ ಅಧ್ಯಕ್ಷ ಸೂರ್ಯ ಪೂಜಾರಿಯವರು ಮಹಾಸಭೆಯನ್ನು ಬಹಿಷ್ಕರಿಸುವುದಾಗಿ ಘೋಷಿಸಿ, ಕೆಲವು ಸದಸ್ಯರೊಂದಿಗೆ ಸಭೆಯಿಂದ ನಿರ್ಗಮಿಸಿದರು.

ಕಾರ್ಯಸೂಚಿ 9 - ಚಾರಿಟಿ ಕಮಿಷನರ್‌ಗೆ ಸಲ್ಲಿಸಲ್ಪಟ್ಟ ಚೇಂಜ್ ರಿಪೋರ್ಟ್ ಬಗ್ಗೆ ವಿವರಣೆ :

ಚಾರಿಟಿ ಕಮಿಷನರ್‌ಗೆ ಸಲ್ಲಿಸಲ್ಪಟ್ಟ ಆಡಳಿತ ಸಮಿತಿ ಬದಲಾವಣೆ ವರದಿ ಬಗ್ಗೆ ಮಾನ್ಯ ನಾಗೇಶ ಬಿಲ್ಲವರು ಸಭೆಗೆ ವಿವರಿಸುತ್ತಾ, ಇದು Maharashtra Public Trust Act ನ clause 22ರ ಪ್ರಕಾರ ಆಡಳಿತ ಸಮಿತಿಯ ಬದಲಾವಣೆ ವರದಿಯನ್ನು ಸಮಿತಿ ಬದಲಾವಣೆಯಾದ 90 ದಿನ ಅಂದರೆ 3 ತಿಂಗಳಿನೊಳಗೆ ಖಡ್ಡಾಯವಾಗಿ ಸಲ್ಲಿಸಬೇಕು. ಇಲ್ಲವಾದರೆ ದಂಡ ತೆರಬೇಕು. ನಮ್ಮ ಸಂಘ ನೋಂದಣಿಯಾದ 1990ರಲ್ಲಿ ಬದಲಾವಣೆ ವರದಿಯನ್ನು ಸಲ್ಲಿಸಿದ್ದಾರೆ. ಆನಂತರ ಇಲ್ಲಿಯವರೆಗೆ ಯಾವುದೇ ಸಮಿತಿಯವರು ಸಲ್ಲಿಸಲಿಲ್ಲ. ಈಗ ನಾವು 2024-26ನೇ ಸಾಲಿನ ಬದಲಾವಣೆ ವರದಿಯನ್ನು ಸಲ್ಲಿಸಿದ್ದು, ಅದರ ಪಾವತಿ ಸಿಕ್ಕಿದೆ. ಆದರೆ ನಮ್ಮ ಸಂಘದ ಹಿಂದಿನ ಯಾವುದೇ ದಾಖಲೆಗಳು ಚಾರಿಟಿ ಕಮಿಷನರ ಕಚೇರಿಯಲ್ಲಿ ಲಭ್ಯವಿಲ್ಲದೇ ಇರುವುದರಿಂದ ಹಿಂದಿನ ಎಲ್ಲಾ ಕಾಲಾವಧಿಯ 17 ಬದಲಾವಣೆ ವರದಿಗಳನ್ನು ದಾಖಲೆಗಳೊಂದಿಗೆ ಸಲ್ಲಿಸಬೇಕಾಗಿದೆ. ಅದಕ್ಕೆ ಈ ಹಿಂದಿನ ಎಲ್ಲಾ ಸಮಿತಿಯ ಎಲ್ಲಾ ಸದಸ್ಯರ ಸಹಕಾರ ಬೇಕಾಗಿದೆ ಎಂದು ಸಭೆಗೆ ತಿಳಿಸಿದರು.

ಕಾರ್ಯಸೂಚಿ 10 - ಸಂಘದ ನಿಕಟಪೂರ್ವ ಸಮಿತಿಯ ಪದಾಧಿಕಾರಿಗಳ ಪತ್ರ ವ್ಯವಹಾರಗಳ ಬಗ್ಗೆ ವಿವರಣೆ :

ಸಂಘದ ನಿಕಟಪೂರ್ವ ಸಮಿತಿಯ ಪದಾಧಿಕಾರಿಗಳ ಪತ್ರ ವ್ಯವಹಾರಗಳ ಬಗ್ಗೆ ವಿವರಣೆಯನ್ನು ಸಂಬಂಧಪಟ್ಟ ಸದಸ್ಯರ ಗೈರು ಹಾಜರಿಯನ್ನು ಗಮನಿಸಿ ಅದನ್ನು ಚರ್ಚಿಸಲಿಲ್ಲ.

ಕಾರ್ಯಸೂಚಿ 11 - ಸಂಘದ ಹಿತಾಭಿವೃದ್ಧಿಯ ಕುರಿತು ಸದಸ್ಯರ ಸಲಹೆ ಸೂಚನೆಗಳು :

ಈಗಾಗಲೇ ಕೆಲವು ಸದಸ್ಯರು ಸಂಘದ ಹಿತಾಭಿವೃದ್ಧಿಯ ಕುರಿತು ಮಾತನಾಡಿರುವ ಕಾರಣ ಅದನ್ನು ಪುನಾರವರ್ತನೆ ಮಾಡುವುದು ಬೇಡ ಎಂದು ಮಹಾಸಭೆ ಅಭಿಪ್ರಾಯ ಪಟ್ಟಿತು.

ಕಾರ್ಯಸೂಚಿ 12 - ಅಧ್ಯಕ್ಷರ ಭಾಷಣ :

ಸಂಘದ 37ನೇ ವಾರ್ಷಿಕ ಮಹಾಸಭೆಯ ಅಧ್ಯಕ್ಷ ಸ್ಥಾನದಿಂದ ಶ್ರೀ ಸಿ.ಎ. ಪೂಜಾರಿಯವರು ಮಾತನಾಡುತ್ತಾ, ನಾವೆಲ್ಲರೂ ಒಂದೇ ಸಮಾಜದ ಒಂದೇ ಊರಿನವರು. ನಾವು ಒಬ್ಬರಿಗೊಬ್ಬರು ನಿಕಟ ಸಂಬಂಧಿಗಳು. ನಾವು ಸಂಘಕ್ಕೆ ಬಂದಿರುವುದು ಸಂಘಟನೆಯನ್ನು ಬಲಪಡಿಸಲಿಕ್ಕಾಗಿ. ಸಂಘಟನೆಯಿಂದ ಬಲಯುತರಾಗಲು. ಕ್ಷುಲ್ಲಕ ಕಾರಣಗಳಿಗಾಗಿ ನಮ್ಮ ಸಂಬಂಧವನ್ನು ಸಂಘದ ಹೆಸರಿನಲ್ಲಿ ಕೆಡಿಸಿಕೊಳ್ಳಬಾರದು. ಯಾವುದೇ ಕುರ್ಚಿ ಸ್ಥಿರವಲ್ಲ. ಸಾಮರಸ್ಯತೆಯ ಸಮಾಜ ನಿರ್ಮಾಣವಾಗಬೇಕು. ನಾವು ಒಂದು ಮಾದರಿ ಸಂಘಟನೆಯಾಗಿ ಇತರರಿಗೆ ಆದರ್ಶರಾಗಬೇಕು. ಬ್ರಹ್ಮಶ್ರೀ ನಾರಾಯಣ

ಗುರು ದೇವರ ಸಂದೇಶಕ್ಕೆ ಮೌಲ್ಯ ಕೊಡಬೇಕು. ಈ ಹಿಂದೆಯೂ ಹತ್ತು ಮಂದಿ ಅಧ್ಯಕ್ಷರು ಈ ಸ್ಥಾನಕ್ಕೆ ಉತ್ತಮ ಗೌರವ, ಘನತೆಯನ್ನು ನೀಡಿದ್ದಾರೆ. ಅದನ್ನು ನಾವು ಸದಾ ನೆನಪಿಟ್ಟುಕೊಂಡು ಮುಂದುವರಿಸಿಕೊಂಡು ಹೋಗಬೇಕು. ಅದಕ್ಕೆ ತಮ್ಮೆಲ್ಲರ ಸಹಾಯ, ಸಹಕಾರ ನಿರಂತರವಾಗಿ ಬೇಕು ಎಂದು ಸಂಘಟನೆಗೆ ಕರೆ ನೀಡಿದರು.

ಕಾರ್ಯಸೂಚಿ 13 - ವಂದನಾರ್ಪಣೆ :

ಕೊನೆಯಲ್ಲಿ ಜೊತೆ ಕಾರ್ಯದರ್ಶಿ ಶ್ರೀ ಸದಾನಂದ ಬಿ ಪೂಜಾರಿಯವರ ವಂದನಾರ್ಪಣೆ ಹಾಗೂ ರಾಷ್ಟ್ರಗೀತೆಯೊಂದಿಗೆ ಅಂದಿನ ಮಹಾಸಭೆಯು ಮುಕ್ತಾಯಗೊಂಡಿತು.

ವರದಿ ವರ್ಷದ ಚಟುವಟಿಕೆಗಳ ಸಾರಾಂಶ :

1. ದಸರಾ ಪ್ರಯುಕ್ತ ತಾ. 28.09.2025ರಂದು ದುರ್ಗಾ ಪೂಜೆಯನ್ನು ಭಕ್ತಿಭಾವದಿಂದ ಥಾಣೆ ಕಚೇರಿಯಲ್ಲಿ ಆಚರಿಸಲಾಯಿತು.

2. ವರದಿ ವರ್ಷದಲ್ಲಿ ಸಂಘದ ಗೌರವಾಧ್ಯಕ್ಷ ಮಾನ್ಯ ಸುರೇಶ್ ಎಸ್. ಪೂಜಾರಿಯವರ ನಿಧನ (04.06.2025) ದಿಂದ ತೆರವಾಗಿದ್ದ ಗೌರವಾಧ್ಯಕ್ಷ ಸ್ಥಾನಕ್ಕೆ ಸಂಘದ ಮಾಜಿ ಅಧ್ಯಕ್ಷ ಮಾನ್ಯ ಮಂಜುನಾಥ ಎ. ಬಿಲ್ಲವರನ್ನು 9 ನವೆಂಬರ್ 2025ರ ಮಾಸಿಕ ಸಭೆಯಲ್ಲಿ ನೇಮಕಗೊಳಿಸಲಾಯಿತು.

3. ಸಂಘದ ವಾರ್ಷಿಕ ಕೋಟಿ-ಚೆನ್ನಯ ಕ್ರೀಡಾಕೂಟವನ್ನು ದಿನಾಂಕ 25.1.2026ರಂದು ಗುರುನಾನಕ್ ವಿದ್ಯಾ ಸಂಕುಲ, ಸಯನ್ ಕೋಲಿವಾಡದಲ್ಲಿ ವಿಜೃಂಭಣೆಯಿಂದ ಜರಗಿಸಲಾಯಿತು. ಕ್ರೀಡೋತ್ಸವದ ಉದ್ಘಾಟನೆಯನ್ನು ಬಿಲ್ಲವರ ಎಸೋಸಿಯೇಶನ್ ಮುಂಬಯಿ ಅಧ್ಯಕ್ಷ ಹರೀಶ್ ಜಿ. ಅಮೀನ್ ನೆರವೇರಿಸಿದರು. ಕ್ರೀಡೋತ್ಸವಕ್ಕೆ ವಿಶೇಷ ಅತಿಥಿಗಳಾಗಿ ಉದ್ಯಮಿ ಎನ್. ಟಿ. ಪೂಜಾರಿ, ಬಿಲ್ಲವರ ಅಸೋಸಿಯೇಶನ್ ಮುಂಬಯಿ ಇದರ ಗೌ. ಪ್ರ. ಕಾರ್ಯದರ್ಶಿ ಹರೀಶ್ ಜಿ. ಸಾಲ್ಯಾನ್, ಸಿಬಿಐ ಅಧಿಕಾರಿ ಉದಯ ಎನ್. ಪೂಜಾರಿ ಕೆರ್ಗಾಲ್, ಹೊಟೇಲ್ ಉದ್ಯಮಿ ಸುರೇಶ್ ಸಿ. ಪೂಜಾರಿ ಬದ್ಲಾಪುರ, ನ್ಯಾಯವಾದಿ ಅಮಿತಾ ವೆಂಕಟೇಶ್ ಪೂಜಾರಿ, ಡಾ. ಶೇಕರ್ ಹೆಮ್ಮಾಡಿ, ನ್ಯಾಯವಾದಿ ಕೇಶವ ವಿ. ಪೂಜಾರಿ, ಹೋಟೆಲ್ ಉದ್ಯಮಿ ಸಂತೋಷ್‌ಕುಮಾರ್ ಶೆಟ್ಟಿ ಹೊಸೂರು ಹಾಗೂ ಹಲವಾರು ಮಂದಿ ಸದಸ್ಯ ಬಾಂಧವರು ಮತ್ತು ಮಕ್ಕಳು ಆಗಮಿಸಿ ಕ್ರೀಡೋತ್ಸವಕ್ಕೆ ವಿಶೇಷ ಮೆರುಗು ನೀಡಿದರು.

4. ವರ್ಷಂಪ್ರತಿಯಂತೆ ಜರಗಿಸುವ ಮಹಿಳೆಯರ ಅರಸಿನ ಕುಂಕುಮ ಕಾರ್ಯಕ್ರಮ ಹಾಗೂ ಮಹಿಳಾ ದಿನಾಚರಣೆಯನ್ನು ಜಂಟಿಯಾಗಿ ದಿನಾಂಕ 8.3.2026ರಂದು ಅಚ್ಚುಕಟ್ಟಾಗಿ ಶಿಸ್ತುಬದ್ಧವಾಗಿ ಮಹಿಳಾ ಸಂಪದದ ಸದಸ್ಯೆಯರು ಸಂಭ್ರಮದಿಂದ ನೆರವೇರಿಸಿದರು. ಅಂದಿನ ಸಭಾ ಕಾರ್ಯಕ್ರಮದಲ್ಲಿ ನಮ್ಮ ಸಮಾಜದ ಸ್ನಾತಕೋತ್ತರ ಪದವೀಧರರನ್ನು ಸನ್ಮಾನಿಸಿ, ಗೌರವಿಸಲಾಯಿತು. ಸಮಾಜದ ಅರ್ಹ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ಮತ್ತು ವಿದ್ಯಾರ್ಥಿ ವೇತನಗಳನ್ನು ವಿತರಿಸಲಾಯಿತು. ಅತಿಥಿಗಳಾಗಿ ಶ್ರೀ ಪ್ರಕಾಶ ಹೆಗ್ಡೆ ಕುಂಠಿನಿ, ರಮಾಬಾಯಿ ಆರ್. ಕಾಮತ್, ಮೀರಾ ಟಿ. ಶೆಟ್ಟಿ, ಆಶಾ ಎ. ಸೋನಾವಣೆ, ಪೂರ್ಣಿಮಾ ಆರ್. ಪೂಜಾರಿ, ಲಕ್ಷ್ಮೀ ಆರ್. ಪೂಜಾರಿ, ಕವಿತಾ ಅಶೋಕ ಪೂಜಾರಿ, ಸುನೀತಾ ಎಸ್. ವೆಲ್ವಟಕರ್ ಮತ್ತು ಹೆಚ್ಚಿನ ಸಂಖ್ಯೆಯಲ್ಲಿ ಸಮಾಜ ಬಾಂಧವರು ಭಾಗವಹಿಸಿದ್ದರು.

5. ಸಂಘದ ವತಿಯಿಂದ ಯುವ ಜನತೆಯ ಸ್ಫೂರ್ತಿಗಾಗಿ ಕುಂದಾಪುರ ಬಿಲ್ಲವ ಟ್ರೋಫಿ ಎಂಬ ಕ್ರಿಕೆಟ್ ಟೂರ್ನಮೆಂಟನ್ನು ದಿನಾಂಕ 22.3.2026ರಂದು ಹಲವು ತಂಡಗಳ ಸಹಯೋಗದೊಂದಿಗೆ ಡಿಫಾದ ಪಟ್ಟಿ ಮೈದಾನದಲ್ಲಿ ಸಂಭ್ರಮದಿಂದ ಜರುಗಿಸಲಾಯಿತು. ಬಿಲ್ಲವರ ಎಸೋಸಿಯೇಶನ್ ಮುಂಬಯಿಯ ಗೌರವ ಕೋಶಾಧಿಕಾರಿ ರವಿ ಬಿ. ಸನಿಲ್‌ರವರು ಕ್ರಿಕೆಟ್ ಪಂದ್ಯಾಟವನ್ನು ಉದ್ಘಾಟಿಸಿದರು. ಅತಿಥಿಗಳಾಗಿ ಗಂಗಾಧರ ಬಂಗೇರ, ಹರೀಶ್ ಜಿ. ಅಮೀನ್, ಎನ್. ಟಿ. ಪೂಜಾರಿ, ಪುರುಷೋತ್ತಮ ಕೋಟಿಯಾನ್ ಮುಂತಾದವರು ಭಾಗವಹಿಸಿದರು. ಉಟೋಪಚಾರವನ್ನು ಮಂಜುನಾಥ ಪೂಜಾರಿ, M/s. Venture Professional Hospitalityರವರು ನೀಡಿರುತ್ತಾರೆ.

01-04-2026ರ ನಂತರ ಜರಗಿದ ಚಟುವಟಿಕೆಗಳು :

1. ಸಂಘದ ಮಹಿಳಾ ಸಂಪದದ ನೇತೃತ್ವದಲ್ಲಿ 9.8.2026ರಂದು ಆಷಾಢ ಹಬ್ಬವನ್ನು ಸಂಭ್ರಮದಿಂದ ಥಾಣೆ ಪಶ್ಚಿಮ, ರೈಲ್ವೆ ನಿಲ್ದಾಣದ ಹತ್ತಿರವಿರುವ ಶುಭಾರಂಭ ಸಭಾಗೃಹದಲ್ಲಿ ನೆರವೇರಿಸಲಾಯಿತು. ಈ ಸಂದರ್ಭದಲ್ಲಿ ಬೈಂದೂರು ಕ್ಷೇತ್ರದ ಶಾಸಕ ಮಾನ್ಯ ಗುರುರಾಜ ಗಂಟಿಹೊಳೆ ಹಾಗೂ ಮಾನ್ಯ ನರಸಿಂಹ ಪೂಜಾರಿ ಪಡುಕೋಣೆ ಮುಂತಾದವರು ಚಾತುರ್ಮಾಸ ಆಚರಣೆಯ ಆಮಂತ್ರಣ ನೀಡಲು ಆಗಮಿಸಿದ್ದ ಅವರಿಗೆ ಗೌರವ, ಸನ್ಮಾನ ಮಾಡಲಾಯಿತು. ಅದೇ ವೇದಿಕೆಯಲ್ಲಿ ಶ್ರೀ ನಾಗರಾಜ ಬಿ. ಪೂಜಾರಿಯವರನ್ನು ಶೌರ್ಯ ಕಾರ್ಯಕ್ಕಾಗಿ ಹಾಗೂ ಧನರಾಜ ಎಚ್. ಪೂಜಾರಿಯವರನ್ನು ಮ್ಯಾರಥಾನ್ ಓಟದ ಸಾಧನೆಗಾಗಿ ಸನ್ಮಾನಿಸಿ ಗೌರವಿಸಲಾಯಿತು. ಅತಿಥಿಗಳಾಗಿ ಸುಧಾಕರ ಪೂಜಾರಿ ಗುಲ್ವಾಡಿ, ಅಂಬಿಕಾ ಜೆ. ದೇವಾಡಿಗ, ಜಯಲಕ್ಷ್ಮೀ ಎಚ್. ಶೆಟ್ಟಿ, ವನಿತಾ ಎ. ಕುಕ್ಯಾನ್ ಭಾಗವಹಿಸಿದರು. ಸಂಘದ ಮಹಿಳಾ ಸದಸ್ಯರು 45ಕ್ಕಿಂತ ಹೆಚ್ಚು ರುಚಿಕರವಾದ ಖಾದ್ಯಗಳನ್ನು ತಯಾರಿಸಿ ತಂದಿದ್ದರು.

2. ದಿನಾಂಕ 30.8.2026ರಂದು ಸಂಘದ ಗುರು ಚಾವಡಿಯಲ್ಲಿ ಬ್ರಹ್ಮಶ್ರೀ ನಾರಾಯಣ ಗುರುದೇವರ 172ನೇ ಜಯಂತಿಯನ್ನು ಅದ್ದೂರಿಯಾಗಿ ಆಚರಿಸಲಾಯಿತು. ಅದೇ ದಿನ ಮುಂಜಾನೆಯಿಂದ ಸಂಜೆಯತನಕ ನಗರದ ಹತ್ತು ಪ್ರಸಿದ್ಧ ಭಜನಾ ತಂಡಗಳ ಸಹಯೋಗದೊಂದಿಗೆ ಏಕಾಹ ಭಜನೆ, ಕೀರ್ತನೆ, ಕುಣಿತ ಭಜನೆಯನ್ನು ನೆರವೇರಿಸಲಾಯಿತು. ಹಾಗೂ ಅದೇ ಸಂದರ್ಭದಲ್ಲಿ ಸಂಘದ ಹಿರಿಯ ಕಾರ್ಯಕರ್ತೆ, ಸಮಾಜ ಸೇವಕಿ ಸಂಘದ ಪ್ರಥಮ ಅಧ್ಯಕ್ಷ ದಿ. ಕೆ. ಎನ್. ಹೊಕ್ಕೋಳಿ ಅವರ ಧರ್ಮಪತ್ನಿ ಶ್ರೀಮತಿ ಗಿರಿಜಾ ಕೆ. ಹೊಕ್ಕೋಳಿಯವರನ್ನು ಸನ್ಮಾನಿಸಿ, ಗೌರವಿಸಲಾಯಿತು. ಅಂದಿನ ಭಕ್ತಿಸುಧೆಯ ಕಾರ್ಯಕ್ರಮಕ್ಕೆ ವಿಶೇಷವಾಗಿ ಮಾಜಿ ಮೇಯರ್ ಶ್ರೀಮತಿ ಮೀನಾಕ್ಷಿ ಆರ್. ಶಿಂಧೆ (ಪೂಜಾರಿ), ಬಿಲ್ಲವರ ಅಸೋಸಿಯೇಶನ್ ಅಧ್ಯಕ್ಷ ಹರೀಶ್ ಅಮೀನ್, ಕಾರ್ಯದರ್ಶಿ ಹರೀಶ್ ಸಾಲಿಯಾನ್, ಹೊಟೇಲು ಉದ್ಯಮಿ ಸುರೇಶ್ ಪೂಜಾರಿ ಬದ್ಲಾಪುರ, ಭಾರತ್ ಕೋ. ಆಪರೇಟಿವ್ ಬ್ಯಾಂಕಿನ ನಿರ್ದೇಶಕ ನಾರಾಯಣ ಸುವರ್ಣ ಮತ್ತು ದಯಾನಂದ ಆರ್. ಪೂಜಾರಿ, ಕಲ್ವಾ ಮುಂತಾದವರು ಆಗಮಿಸಿ ಶ್ರೀ ಗುರುದೇವರ ದರ್ಶನ ಪಡೆದರು.

3. ದಸರಾ ಪ್ರಯುಕ್ತ ತಾ. 11.10.2026ರಂದು ದುರ್ಗಾ ಪೂಜೆಯನ್ನು ಭಕ್ತಿಭಾವದಿಂದ ಥಾಣೆ ಕಚೇರಿಯಲ್ಲಿ ಆಚರಿಸಲಾಯಿತು.

ಪ್ರಸ್ತುತ ಸಮಿತಿಯವರು ಸಾಧಿಸಿದ ಕಾನೂನು ಮತ್ತು ನಿಯಂತ್ರಕ ಸಾಧನೆಗಳು :

1. ಶಾಸನಬದ್ಧ ಅನುಸರಣೆಯ ಕ್ರಮಬದ್ಧಗೊಳಿಸುವಿಕೆ (1990 ರಿಂದ 2026) : ಬದಲಾವಣೆ ವರದಿಗಳು (Change Reports)*

ನಮ್ಮ ಸಂಘವು ತನ್ನ ಆಡಳಿತದ ಎಲ್ಲಾ ಆಯಾಮಗಳಲ್ಲಿ ಶಾಸನಬದ್ಧ ಶಿಸ್ತು ಮತ್ತು ಪಾರದರ್ಶಕತೆಗೆ ಹೆಚ್ಚಿನ ಆದ್ಯತೆ ನೀಡುತ್ತದೆ. ಕಳೆದ ಹಲವು ವರ್ಷಗಳಲ್ಲಿ, ವ್ಯವಸ್ಥಾಪಕ ಸಮಿತಿಗಳ ರಚನೆಯಲ್ಲಿನ ಬದಲಾವಣೆಗಳು ಸೇರಿದಂತೆ ಹಲವು ಪ್ರಮುಖ ಕಾರ್ಯಾಚರಣೆಯ ನವೀಕರಣಗಳು ಮುಂಬೈನ ಚಾರಿಟಿ ಕಮಿಷನ್ನ ಸರ್ಕಾರಿ ದಾಖಲೆಗಳಲ್ಲಿ ಆಡಳಿತಾತ್ಮಕವಾಗಿ ದಾಖಲಾಗದೆ ಉಳಿದಿದ್ದವು. ಈ ಕೊರತೆಯನ್ನು ಸರಿಪಡಿಸಲು, ಪ್ರಸ್ತುತ ಆಡಳಿತ ಮಂಡಳಿಯು 1990 ರಿಂದ ಇಲ್ಲಿಯ ತನಕದ ಐತಿಹಾಸಿಕ ದಾಖಲೆಗಳನ್ನು ಸಂಗ್ರಹಿಸಲು ಕಠಿಣ ಶ್ರಮ ಪಟ್ಟಿದೆ. ಇದರ ಪರಿಣಾಮವಾಗಿ, ಸಂಘವು ಕಾಯ್ದೆಯ ಸೆಕ್ಷನ್ 22ರ ಅಡಿಯಲ್ಲಿ ಬಾಕಿ ಇದ್ದ 17 ಬದಲಾವಣೆ ವರದಿಗಳನ್ನು (Schedule-I) ಸಿದ್ಧಪಡಿಸಿ, ಚಾರಿಟಿ ಕಮಿಷನರ್ ಕಚೇರಿಗೆ ಅಧಿಕೃತವಾಗಿ ಸಲ್ಲಿಸಿದ್ದು, ವಿವರವಾದ ಚಾರಿಟಿ ಕಮಿಷನ್ ವಿಚಾರಣೆಗಳು ಮತ್ತು ನಮ್ಮ ದಾಖಲೆಗಳ ಪರಿಶೀಲನೆಯ ನಂತರ, ಮಾನ್ಯ ಚಾರಿಟಿ ಕಮಿಷನರ್ ಅವರು ಎಲ್ಲಾ 17 ಬದಲಾವಣೆ ವರದಿಗಳನ್ನು ಅಧಿಕೃತವಾಗಿ ಮಂಜೂರು ಮಾಡಿ ಅನುಮೋದಿಸಿದ್ದಾರೆ. ಈ ಅನುಮೋದನೆಯೊಂದಿಗೆ, ಅಧಿಕೃತ

ಶೆಡ್ಯೂಲ್-I (Schedule-I) ರಿಜಿಸ್ಟರ್ ಸಂಪೂರ್ಣವಾಗಿ ನವೀಕರಿಸಲ್ಪಟ್ಟಿದೆ, ಇದು ಕಳೆದ 36 ವರ್ಷಗಳ ನಮ್ಮ ಸಾಂಸ್ಥಿಕ ಮತ್ತು ಕಾನೂನುಬದ್ಧ ಅವಶ್ಯಕತೆ ಯನ್ನು ಕ್ರಮಬದ್ಧವಾಗಿ ಪೂರ್ಣ ಗೊಳಿಸಿದೆ. *ಈ ಸುದೀರ್ಘ ಬಾಕಿ ಕೆಲಸಗಳನ್ನು ಅತ್ಯಂತ ಶ್ರದ್ಧೆಯಿಂದ ನಿರ್ವಹಿಸಿ ಯಶಸ್ವಿಯಾಗಿ ಪೂರ್ಣಗೊಳಿಸಿದ ತಂಡಕ್ಕೆ ಸಂಘವು ತನ್ನ ಕೃತಜ್ಞತೆಗಳನ್ನು ಸಲ್ಲಿಸುತ್ತದೆ.*

2. ಚಾರಿಟಿ ಕಮಿಷನ್ನಿಂದ ಹೊಸ ಕಚೇರಿ (101, 1ನೇ ಮಹಡಿ, 9 ಮಾನಸಿ, ನೌಪಾಡಾ, ಥಾಣೆ (ಪಶ್ಚಿಮ)) ಅನುಮೋದನೆ

ಸಂಘವು ಮೇ 2023ರಲ್ಲಿ ಥಾಣೆಯ ನೌಪಾಡಾದಲ್ಲಿರುವ '9 ಮಾನಸಿ' ಕಟ್ಟಡದಲ್ಲಿ ಹೊಸ ಸ್ಥಿರ ಆಸ್ತಿಯನ್ನು ಖರೀದಿ ಮಾಡಿದೆ. ಮಹಾರಾಷ್ಟ್ರ ಸಾರ್ವಜನಿಕ ಟ್ರಸ್ಟ್‌ಗಳ ಕಾಯ್ದೆಯ ಸೆಕ್ಷನ್ 22ರ ಅಡಿಯಲ್ಲಿ ಅಗತ್ಯವಿರುವಂತೆ, ಈ ಆಸ್ತಿಯ ವಿವರಗಳನ್ನು ಒಳಗೊಂಡ ಅಧಿಕೃತ ಬದಲಾವಣೆ ವರದಿಯನ್ನು (Change Report) ಆಸ್ತಿ ಖರೀದಿಸಿದ 90 ದಿನಗಳ ಒಳಗೆ ಚಾರಿಟಿ ಕಮಿಷನರ್ ಮುಂದೆ ಸಲ್ಲಿಸಬೇಕಾಗಿತ್ತು. ಪ್ರಸ್ತುತ ಸಮಿತಿಯು ಎಲ್ಲಾ ಅಗತ್ಯ ದಾಖಲೆಗಳೊಂದಿಗೆ ಈ ಬದಲಾವಣೆ ವರದಿಯನ್ನು ಸಲ್ಲಿಸಿದೆ. *ಸಂಬಂಧಪಟ್ಟ ಪ್ರಾಧಿಕಾರವು ವಹಿವಾಟಿನ ದಾಖಲೆಗಳನ್ನು ಪರಿಶೀಲಿಸಿದ್ದು, ಸ್ಥಳ ಪರಿಶೀಲನೆ ಮಾಡಿದ್ದು, ಬದಲಾವಣೆ ವರದಿಯ ಅಧಿಕೃತ ಅನುಮೋದನೆಯನ್ನು ಶೀಘ್ರದಲ್ಲೇ ನಿರೀಕ್ಷಿಸಲಾಗಿದೆ.*

3 ಥಾಣೆ ಮಹಾನಗರ ಪಾಲಿಕೆ (TMC) ಟ್ಯಾಕ್ಸ್ ಮೌಲ್ಯಮಾಪನ ಮತ್ತು ಹೆಸರು ಬದಲಾವಣೆ (ನಾಮ ಪರಿವರ್ತನೆ) : *ಆಡಳಿತ ಕಚೇರಿ : 101, 9 ಮಾನಸಿ, ನೌಪಾಡಾ, ಥಾಣೆ*

ಹಿಂದಿನ ವ್ಯವಸ್ಥಾಪಕ ಸಮಿತಿಯು ಮೇ 2023ರಲ್ಲಿ ನೌಪಾಡಾ ಕಛೇರಿ ಯನ್ನು ಖರೀದಿ ಮಾಡಿದ ನಂತರ, ಸ್ಥಳೀಯ ಮುನ್ಸಿಪಲ್ ಕಚೇರಿಯಲ್ಲಿ ಈ ಆಸ್ತಿಯ ವಿವರಗಳನ್ನು ಸಲ್ಲಿಸಿ ಟ್ಯಾಕ್ಸ್ ವಿಂಗಡಣೆ ಮಾಡಿ ಕೊಳ್ಳ ಬೇಕಿತ್ತು. ಆದರೆ ಆ ಕೆಲಸ ಆಗಿರಲಿಲ್ಲ. ಸಂಘವು ಪೂರ್ಣ ಫ್ಲೋರ್ ನ ಮೇಲಿನ ಟ್ಯಾಕ್ಸ್ ಡಿಮ್ಯಾಂಡ್ ನೋಟೀಸ್ ಪಡೆಯುತಿತ್ತು. Modified Floor Plan ಮತ್ತು ಎಲ್ಲಾ ಅಗತ್ಯ ಆಸ್ತಿ ಹಕ್ಕು ಪತ್ರಗಳನ್ನು ಥಾಣೆ ಮಹಾನಗರ ಪಾಲಿಕೆಗೆ (TMC) ಅರ್ಜಿಯೊಂದಿಗೆ ಸಲ್ಲಿಸಿ, ಮುನ್ಸಿಪಲ್ ತೆರಿಗೆ ಮೌಲ್ಯಮಾಪನದ ತಿದ್ದುಪಡಿ ಮತ್ತು ನಗರ ಸಮೀಕ್ಷೆ ದಾಖಲೆಗಳಲ್ಲಿ ಮಾಲೀಕತ್ವದ ಹೆಸರನ್ನು ಅಧಿಕೃತವಾಗಿ ಬದಲಾಯಿಸಲು ಕೋರಲಾಗಿತ್ತು. ಪಾಲಿಕೆಯು ಈ ತಿದ್ದುಪಡಿಯನ್ನು ಯಶಸ್ವಿಯಾಗಿ ಪೂರ್ಣಗೊಳಿಸಿದ್ದು, ಮುನ್ಸಿಪಲ್ ತೆರಿಗೆ *ಮೌಲ್ಯಮಾಪನಗಳನ್ನು ನವೀಕರಿಸಿದೆ ಮತ್ತು ಆಸ್ತಿ ದಾಖಲೆಗಳನ್ನು ಅಧಿಕೃತವಾಗಿ ಸಂಘದ ಹೆಸರಿಗೆ ಬದಲಾಯಿಸಿದೆ ಎಂದು ತಿಳಿಸಲು ನಾವು ಸಂತೋಷಪಡುತ್ತೇವೆ.*

4. ಮೂಲಸೌಕರ್ಯ ನೋಂದಣಿ (MSEB)*

ನಮ್ಮ ಹೊಸ ಕಚೇರಿಯ ಬಳಕೆಯನ್ನು ಇನ್ನಷ್ಟು ಸುಗಮಗೊಳಿಸಲು, ವಿದ್ಯುತ್ ಮೀಟರ್ ವರ್ಗಾವಣೆಗಾಗಿ ಮಹಾರಾಷ್ಟ್ರ ರಾಜ್ಯ ವಿದ್ಯುತ್ ಮಂಡಳಿಗೆ (MSEB) ಅರ್ಜಿಯನ್ನು ಸಲ್ಲಿಸಲಾಗಿತ್ತು. ಈ ನಾಮ ಪರಿವರ್ತನೆ ಪ್ರಕ್ರಿಯೆಯು ಈಗ ಪೂರ್ಣಗೊಂಡಿದ್ದು, *ವಿದ್ಯುತ್ ಸಂಪರ್ಕವನ್ನು ಅಧಿಕೃತವಾಗಿ ಸಂಘದ ಹೆಸರಿನಲ್ಲಿ ನೋಂದಾಯಿಸಲಾಗಿದೆ.*

5. ದೀರ್ಘಕಾಲೀನ ಆದಾಯ ತೆರಿಗೆ ವಿನಾಯಿತಿಗಳನ್ನು ಪಡೆಯುವುದು (12A ಮತ್ತು 80G)*

ನಮ್ಮ ದತ್ತಿ ಕಾರ್ಯಾಚರಣೆಗಳು ಮತ್ತು ಸಾರ್ವಜನಿಕ ಕಲ್ಯಾಣ ಉಪಕ್ರಮಗಳನ್ನು ಗುರುತಿಸಲು, ಸಂಘವು ಕಳೆದ ಸತತ 3 ವರ್ಷಗಳ ತನ್ನ ಕಾರ್ಯಾಚರಣೆ ಮತ್ತು ಹಣಕಾಸು ಚಟುವಟಿಕೆಗಳ ನಿಖರವಾದ ವರದಿಯನ್ನು ಆದಾಯ ತೆರಿಗೆ ಇಲಾಖೆಗೆ ಸಲ್ಲಿಸಿದೆ. ಇದರ ಪರಿಣಾಮವಾಗಿ, ಸಂಘಕ್ಕೆ ದೀರ್ಘಕಾಲೀನ ಆದಾಯ ತೆರಿಗೆ ವಿನಾಯಿತಿಗಳನ್ನು ನೀಡಲಾಗಿದೆ.

***ಸೆಕ್ಷನ್ 12A ಪ್ರಮಾಣೀಕರಣ* :** ಇದು ಮೌಲ್ಯಮಾಪನ ವರ್ಷ (A.Y) 2027-28 ರಿಂದ 2036-37ರ ವರೆಗೆ 10 ವರ್ಷಗಳ ಅವಧಿಗೆ ಸಿಂಧುತ್ವವನ್ನು ಹೊಂದಿದ್ದು, ಸಂಸ್ಥೆಯ ಆದಾಯದ ಮೇಲಿನ ತೆರಿಗೆ ವಿನಾಯಿತಿಯನ್ನು ಸುರಕ್ಷಿತಗೊಳಿಸುತ್ತದೆ.

***ಸೆಕ್ಷನ್ 80G ಪ್ರಮಾಣೀಕರಣ* :** ಇದು ಮೌಲ್ಯಮಾಪನ ವರ್ಷ (AY) 2027-28 ರಿಂದ 2031-32 ರವರೆಗೆ 5 ವರ್ಷಗಳ ಅವಧಿಗೆ ಸಿಂಧುತ್ವವನ್ನು ಹೊಂದಿದ್ದು, ನಮ್ಮ ಉದಾರ ದಾನಿಗಳು ತಾವು ನೀಡುವ ದೇಣಿಗೆಯ ಮೇಲೆ ಅರ್ಹ ತೆರಿಗೆ ಕಡಿತಗಳನ್ನು (Tax Deductions) ಪಡೆಯಲು ಅನುವು ಮಾಡಿಕೊಡುತ್ತದೆ. ಇದು ನಮ್ಮ ನಿಧಿ ಸಂಗ್ರಹಣಾ ಸಾಮರ್ಥ್ಯವನ್ನು ಗಮನಾರ್ಹವಾಗಿ ಹೆಚ್ಚಿಸಲಿದೆ.

ನಿರಂತರ ಗುರುಪೂಜೆ ಸೇವೆ :

ಸಂಘದ ಗುರು ಚಾವಡಿಯಲ್ಲಿ ಪ್ರತೀ ತಿಂಗಳ 2ನೇ ಶನಿವಾರ ಸಂಜೆ 3.00 ಘಂಟೆಯಿಂದ ಮಾಸಿಕ ಗುರುಪೂಜೆಯನ್ನು ಕುಳಿತು ಭಜನೆ, ಕುಣಿತ ಭಜನೆ, ಗುರು ಸ್ತೋತ್ರ ಪಠಣೆ ಹಾಗೂ ಮಹಾಮಂಗಳಾರತಿಯೊಂದಿಗೆ ಸಂಭ್ರಮದಿಂದ ಜರಗಿಸಲಾಗುತ್ತಿದೆ. ಮಾಸಿಕ ಗುರುಪೂಜೆಯು ನಿರಂತರವಾಗಿ ಸಡಗರದಿಂದ ಜರಗುತ್ತಿರಬೇಕು ಎಂಬ ಉದ್ದೇಶದಿಂದ **'ನಿರಂತರ ಗುರುಪೂಜೆ ಸೇವೆ'** (ನಿರಂತರ 12 ತಿಂಗಳ ಮಾಸಿಕ ಗುರು ಪೂಜೆ) ಎಂಬ ನೂತನ ಯೋಜನೆಯನ್ನು ಹಮ್ಮಿಕೊಳ್ಳಲಾಗಿದ್ದು ಅದರಲ್ಲಿ ಈ ಕೆಳಗಿನ 19 ಮಂದಿ ಸದ್ಭಕ್ತ ಪರಿವಾರದವರು ತಮ್ಮ ಹೆಸರನ್ನು ನೋಂದಾಯಿಸಿರುವುದು ಸಂತಸದ ಸಂಗತಿ.

1. ಶ್ರೀಮತಿ ಸುಶೀಲಾ ಸುರೇಶ್ ಪೂಜಾರಿ ಮತ್ತು ಪರಿವಾರ, ಬದ್ಲಾಪುರ
2. ಶ್ರೀಮತಿ ಉಮಾ ಮಂಜುನಾಥ ಬಿಲ್ಲವ ಮತ್ತು ಪರಿವಾರ, ಥಾಣೆ
3. ಶ್ರೀಮತಿ ವಿಶಾಲಾಕ್ಷಿ ಸಿ. ಪೂಜಾರಿ ಮತ್ತು ಪರಿವಾರ, ಥಾಣೆ
4. ಶ್ರೀಮತಿ ಬೇಬಿ ರಂಗ ಪೂಜಾರಿ ಮತ್ತು ಪರಿವಾರ, ಥಾಣೆ
5. ಶ್ರೀಮತಿ ಉಷಾ ಜಗನ್ನಾಥ ಪೂಜಾರಿ ಮತ್ತು ಪರಿವಾರ, ಥಾಣೆ
6. ಶ್ರೀಮತಿ ಶಾರದಾ ಬಾಬು ಪೂಜಾರಿ ಮತ್ತು ಪರಿವಾರ, ದಿಘಾ
7. ಶ್ರೀಮತಿ ಸುಗಂಧ ಸದಾನಂದ ಪೂಜಾರಿ ಮತ್ತು ಪರಿವಾರ, ಕಲ್ವಾ
8. ಶ್ರೀಮತಿ ವಿಮಲಾ ಸುಧಾಕರ ಪೂಜಾರಿ ಮತ್ತು ಪರಿವಾರ, ಡೊಂಬಿವಲಿ
9. ಶ್ರೀಮತಿ ಲಲಿತಾ ನಾಗೇಶ್ ಬಿಲ್ಲವ ಮತ್ತು ಪರಿವಾರ, ಮುಲುಂಡ್
10. ಶ್ರೀಮತಿ ಸುಮತಿ ಎಸ್. ಪೂಜಾರಿ ಮತ್ತು ಪರಿವಾರ, ಖಾರ್ಘರ್
11. ಶ್ರೀಮತಿ ಕಲ್ಪನಾ ಶೇಖರ್ ಬಿಲ್ಲವ ಮತ್ತು ಪರಿವಾರ, ಡೊಂಬಿವಲಿ
12. ಶ್ರೀಮತಿ ನೇತ್ರಾವತಿ ರವೀಂದ್ರ ಪೂಜಾರಿ ಮತ್ತು ಪರಿವಾರ, ಪೊವಾಯಿ
13. ಶ್ರೀಮತಿ ರತ್ನಾವತಿ ರಮೇಶ್ ಬಿಲ್ಲವ ಮತ್ತು ಪರಿವಾರ, ನೆರುಳ್
14. ಕುಮಾರಿ ಸೌಮ್ಯ ಸಂಜೀವ ಪೂಜಾರಿ ಮತ್ತು ಪರಿವಾರ, ಬೊರಿವಲಿ
15. ಶ್ರೀಮತಿ ಜಯಶ್ರೀ ಸ್ವಪ್ನಿಲ್ ಮತ್ತು ಪರಿವಾರ, ಮುಂಬ್ರಾ

16. ಕುಮಾರಿ ಸುಪ್ರಭಾ ಭಾಸ್ಕರ್ ಪೂಜಾರಿ ಮತ್ತು ಪರಿವಾರ, ಬೊರಿವಲಿ

17. ಶ್ರೀಮತಿ ಶೋಭಾ ಅಶೋಕ್ ಪೂಜಾರಿ ಮತ್ತು ಪರಿವಾರ, ಡೊಂಬಿವಲಿ

18. ಶ್ರೀಮತಿ ಕವಿತಾ ಸುಧಾಕರ ಪೂಜಾರಿ ಮತ್ತು ಪರಿವಾರ, ಥಾಣೆ

19. ಶ್ರೀಮತಿ ಮತ್ತು ಶ್ರೀ ಕೆ. ಟಿ. ಪೂಜಾರಿ ಮತ್ತು ಪರಿವಾರ, ಭಾಂಡುಪ್

ಪ್ರತಿ ತಿಂಗಳ ಮಾಸಿಕ ಗುರುಪೂಜೆಗೆ ವಿಶೇಷ ಲಾಡು ಸೇವೆಯನ್ನು ಶ್ರೀ ಹರೇಶ್ ಕೆ. ಹೊಕ್ಕೋಳಿ ಮತ್ತು ಪರಿವಾರ, ಮುಲುಂಡ್ ಮತ್ತು ದೀಪದ ಎಣ್ಣೆಯನ್ನು ಶ್ರೀಮತಿ ಚೈತ್ರಾ ಗಣೇಶ್ ಸುವರ್ಣ ಭಾಂಡುಪ್ ನೀಡುತ್ತಿರುವರು. ಇದರ ಹೊರತಾಗಿ ಅನೇಕ ಭಕ್ತ ಮಹನೀಯರು ಪಾಯಸ ಸೇವೆ, ಅನ್ನ ಸಂತರ್ಪಣೆ ಮತ್ತು ಇತ್ಯಾದಿ ಸೇವೆಗಳನ್ನು ಸಲ್ಲಿಸುತ್ತಿದ್ದಾರೆ. ಸಂಘದ ಗುರು ಚಾವಡಿಯಲ್ಲಿ ಗುರು ಜಯಂತಿ, ಗುರು ಪೂರ್ಣಿಮೆ, ಮಹಾಶಿವರಾತ್ರಿ, ದುರ್ಗಾ ಪೂಜೆ ಮುಂತಾದ ವಿಶೇಷ ಸೇವೆಗಳು ಜರಗುತ್ತವೆ.

ನಿಮ್ಮ ಅಥವಾ ನಿಮ್ಮ ಮಕ್ಕಳ ಹುಟ್ಟು ಹಬ್ಬ / ವಿವಾಹ ವಾರ್ಷಿಕೋತ್ಸವ ಮುಂತಾದ ಶುಭ ಸಂದರ್ಭಗಳಲ್ಲಿ ನಿರಂತರ / ಮಾಸಿಕ ಗುರುಪೂಜೆಯನ್ನು ನೀಡಿ, ಗುರು ದೇವರ ಕೃಪೆಗೆ ಪಾತ್ರರಾಗಬೇಕಾಗಿ ವಿನಂತಿ. ನಿರಂತರ ಗುರುಪೂಜೆ ವರ್ಷದ ಹನ್ನೆರಡು ತಿಂಗಳ ಸೇವೆಗೆ ರೂಪಾಯಿ 3600/- ಮತ್ತು ಅಧಿಕ ಹಾಗೂ ತಿಂಗಳ ಗುರುಪೂಜೆಗೆ ರೂ.300/- ಕೊಟ್ಟು ಸೇವೆ ಸಲ್ಲಿಸಬಹುದು. ಹೆಚ್ಚಿನ ಮಾಹಿತಿಗಾಗಿ ಸಂಘದ ಆಡಳಿತ ಅಥವಾ ಉಪಸಮಿತಿಗಳ ಸದಸ್ಯರನ್ನು ಸಂಪರ್ಕಿಸಬಹುದು.

ಕಾರ್ಯಕಾರಿ ಸಮಿತಿ ಸಭೆಗಳು :

ಆಡಳಿತ ಸಮಿತಿಯು ವರದಿ ವರ್ಷದಲ್ಲಿ ಒಟ್ಟು 12 ಮಾಸಿಕ ಸಭೆಗಳನ್ನು ಹಾಗೂ 5 ವಿಶೇಷ ಸಭೆಗಳನ್ನು ಜರಗಿಸಿತು. ಅದರಲ್ಲಿ ಸಮಾಜದ ಹಿತಚಿಂತನೆಯ ಹಲವಾರು ವಿಷಯಗಳ ಕುರಿತು ಸಮಗ್ರ ಚರ್ಚೆ ನಡೆಸಿ, ಸಮಾಜಕ್ಕೆ ಪೂರಕವಾದ ಹಲವು ನಿರ್ಣಯಗಳನ್ನು ಕೈಗೊಂಡು, ಸಂಘದ ಎಲ್ಲಾ ಕಾರ್ಯ ಕಲಾಪಗಳನ್ನು ಸುಸಾಂಗವಾಗಿ ನೆರವೇರಿಸಿಕೊಂಡು ಬಂದಿರುತ್ತದೆ.

ಕಂಬನಿ :

ನಮ್ಮ ಸಂಘದ ಈ ಕೆಳಗಿನ ಮಹನೀಯರು ವಿಧಿವಶರಾಗಿರುವುದು ನಮ್ಮ ಗಮನಕ್ಕೆ ಬಂದಿದ್ದು, ಸಂಘದ ಮಾಸಿಕ ಸಭೆಗಳಲ್ಲಿ ಅವರ ನಿಧನಕ್ಕೆ ಸಂತಾಪವನ್ನು ಸೂಚಿಸಲಾಗಿದೆ.

1. ತಿಮ್ಮಯ್ಯ ಪೂಜಾರಿ, ತೊಪ್ಪಲು (2.3.2026) - ಶ್ರೀ ರಮೇಶ್ ಜಿ. ಬಿಲ್ಲವ (ಬಾಲಾಜಿ ಪ್ರಿಂಟರ್ಸ್) ಅವರ ಅಣ್ಣ

2. ಸಂತೋಷಿ ಎಸ್. ಪೂಜಾರಿ (7.5.2026) - ಸಂಘದ ಮಹಿಳಾ ಸಮಿತಿ ಗೌರವ ಕಾರ್ಯಾಧ್ಯಕ್ಷೆ (ಮಾಜಿ ಗೌರವಾಧ್ಯಕ್ಷ ದಿ. ಸುರೇಶ್ ಎಸ್. ಪೂಜಾರಿಯವರ ಧರ್ಮಪತ್ನಿ)

3. ಶಿವರಾಮ ಟಿ. ಕಂಡ್ಲೂರು (20.5.2026) - ಸಂಘದ ಮಾಜಿ ಅಧ್ಯಕ್ಷರು

4. ಅಕ್ಕಮ್ಮ ದೊಟ್ಟಯ್ಯ ಪೂಜಾರಿ (6.10.2026) - ಶ್ರೀಮತಿ ಮಲ್ಲಿಕಾ ಎಸ್. ಪೂಜಾರಿ (ಮಾಜಿ ಮಹಿಳಾ ಸಮಿತಿ ಕಾರ್ಯಾಧ್ಯಕ್ಷೆ) ಯವರ ತಾಯಿ

5. ರೋಹಿಣಿ ಎನ್. ಪೂಜಾರಿ (8.10.2026) - ಭಾಸ್ಕರ್ ಕೆ. ಪೂಜಾರಿ (ಮಾಜಿ ಕೋಶಾಧಿಕಾರಿ) ಯವರ ಅತ್ತೆ

ಇದರ ಹೊರತಾಗಿಯೂ ಯಾರಾದರೂ ನಮ್ಮ ಸಂಘಕ್ಕೆ ಸಂಬಂಧಪಟ್ಟವರು ನಿಧನರಾಗಿದ್ದು ಅದು ನಮ್ಮ ಗಮನಕ್ಕೆ ಬರದೇ ಇದ್ದರೆ, ಅವರ ಆತ್ಮಕ್ಕೂ ಶ್ರೀ ಪರಮಾತ್ಮನು ಹಾಗೂ ಶ್ರೀ ಗುರುದೇವರು ಚಿರಶಾಂತಿಯನ್ನು ಕರುಣಿಸಲೆಂದು ಪ್ರಾರ್ಥಿಸುತ್ತೇವೆ.

ವರದಿ ವರ್ಷದಲ್ಲಿ ಸಂಘಕ್ಕೆ ನೂತನವಾಗಿ ಸೇರ್ಪಡೆಯಾದ ಸದಸ್ಯರ ವಿವರ :
Names of New Members admitted to Sangha during the present year :

Category	M. S. No.	Name	Native Place	Introducer
LM	2545	Vinod Poojary	Thaggarsi	Abhishek Poojari
LM	2546	Geeta Poojary	Thaggarsi	Abhishek Poojari
LM	2547	Shivara K. Poojary	Kergal	Ashok M. Pooojari
LM	2548	Akshata Prabhakar Poojary	Gangoli	Ashok M. Pooojari
LM	2549	Prabhakar Rama Poojary	Gangoli	Ashok M. Pooojari
LM	2550	Radha Vijay Poojari	Kundapura	Nagaraj B. Poojari
LM	2551	Bhaskar S. Poojari	Kergal	Ravindra N. Poojari
LM	2552	Chandra Mohan Poojari	Sastana	Shankar M. Poojary
LM	2553	Vinoda Chandra Poojari	Maravante	Shankar M. Poojary
LM	2554	Suresh K. Poojari	Hemmadi	Ashok M. Poojari
LM	2555	Nagesh Rama Poojari	Kalthodu	Shankar M. Poojary
LM	2556	Swathi P. Poojari	Kodi	Sugandha S. Poojari
LM	2557	Rajeevi Jayanth Poojari	Hengavali	Shashiraj Poojari
P	2558	Amita V. Poojari	Kambadakone	Nagesh R. Billawa
LM	2559	Anilkumar K. Poojari	Halealive	Sadananda B. Poojari
LM	2560	Vinitha Anil Poojari	Halealive	Sugandha S. Poojari
LM	2561	Manjunath K. Poojari	Kanchikan	Santhosh B. Poojari
LM	2562	Dhanushree M. Poojari	Kanchikan	Santhosh B. Poojari
LM	2563	Tanvi M. Poojari	Kanchikan	Santhosh B. Poojari
LM	2564	Santhosh Poojari	Kambadakone	Raghu Poojari
LM	2565	Ashwini Santhosh Poojari	Edoor Kunjady	Santhosh B. Poojari
LM	2566	Bharathi Ganesh Poojari	Maravanthe	Susheela S. Poojari
LM	2567	Ramachandra K. Salian	Hemmady	Susheela S. Poojari
LM	2568	Shruti V. Poojari	Guddemadi	Susheela S. Poojari
LM	2569	Prapti M. Poojari	Sablady	Susheela S. Poojari
LM	2570	Suguna S. Poojari	Koteshwara	Sadananda B. Poojari
LM	2571	Sujatha P. Poojari	Koteshwara	Ravindra N. Poojari

DONORS' LIST : 01/04/2025 TO 31/03/2026

RS. 5000/- AND ABOVE

(DONATIONS INCLUDE THOSE FROM FAMILY MEMBERS)

Sr. No.	Name of the Donors	Amount
1.	Shri Manjunatha A Billava	1,55,000
2.	Shri Sudhakar N Poojary Gulwady	1,41,010
3.	Shri N. T. Poojary, Smt. Yashoda N Poojary & Family	1,00,000
4.	Advocate Shri H K Sudhakar Arate & Family	1,00,000
5.	Shri Suresh C Poojari & Smt.Susheela S Poojari (Badlapur)	65,718
6.	Shri Mohan Poojary & Smt. Mamata M Poojary	50,000
7.	Shri Shridhar Poojari & Family, Nalasopara	50,000
8.	Shri Mahabala Kundar	45,000
9.	Shri Keshav V Poojary	40,500
10.	Shri Vishwanath A Poojary & Family (Aruna Textiles)	36,801
11.	Shri Sudhakar Poojary Aloor & family	31,405
12.	Shri Bhaskar K Poojari & Family	28,450
13.	Shri Nagesh R BIllava & Smt. Lalitha N Billava & Family	27,750
14.	Shri Ramesh G Billava & Family [M/s. Balaji Printers]	27,006
15.	Shri Venkatesh Poojary & Adv Smt Amitha V Poojary	27,000
16.	Shri S. K. Poojary & family	26,900
17.	Shri N. K. Billava (Radix Corporate Solutions P Ltd)	25,000
18.	Shri Karunakar V. Poojari (M/S Kodi Shipping & Logistics)	25,000
19.	Shri S. T. Poojary & Family	24,800
20.	Shri Channa A Poojary & family	20,600
21.	M/S. Pitambari Products Pvt. Ltd., Thane	20,000
22.	Smt. Ashwini Ashok Matekar	20,000
23.	Shri Ashok M Poojari & Smt. Shobha Poojary & family	14,202
24.	Smt. Sharada Babu Poojary & family	14,101
25.	Smt. Gulabi Babu Poojary & Family	14,000
26.	Shri Shivaram M Poojary (Kalyan)	13,501
27.	Shri Sudhakar C Poojary & Family	11,600
28.	Shri Shekar N Billava & Family	11,202
29.	Smt. Baby Ranga Poojary & Family	11,101
30.	Shri Sanjeeva N. Poojary [Hotel Pimpleshwar, Dombivili]	11,000
31.	Shri Sadanand B. Poojary & family	10,503
32.	Shri Vijay C. Billava & Family	10,301

33.	Shri Nityanand Poojary (Serene Bldg)	10,000
34.	Shri Santosh Kumar Shetty, Hosuru	10,000
35.	Shri Ganesh M. Poojary	10,000
36.	Smt Meera Taranath Shetty, Bhandup	10,000
37.	Shri Satish Shetty [Hotel Ego, Dombivili]	10,000
38.	Smt. Rajshree P. Salian (Kodi) & Family	9,451
39.	Shri Jagannath R. Poojary & Family	9,351
40.	Shri Nagaraj B. Poojari (Court Naka)	8,755
41.	Shri Haresh K. Hokkoli & Family	8,501
42.	Shri Satish Poojary (Suyash Heights)	8,000
43.	Shri Sudhakar Poojary & Family (Deep Bhushan Bldg)	8,000
44.	Mahila Sampada BSSK	8,000
45.	Shri Suhas Babu Poojari	7,000
46.	Shri Shankar R. Poojari (Anuradha Kuteer)	6,857
47.	Smt. Jayashree Swapnil [Kodi] & family	6,500
48.	Shri Gopal Krishna Poojary (Sagar Park)	6,001
49.	Shri Avinash T. Poojari (Silver Bell)	6,000
50.	Shri Narayan Govind Poojary & Family (Gujjadi)	5,500
51.	Shri Bhaskar Poojary (Garadimane)	5,500
52.	Smt Asha Gopal Poojari & family	5,300
53.	Shri Prasad Sudhakar Poojary	5,250
54.	Shri K. T. Poojary & Family	5,100
55.	Smt. Rashmi Poojary	5,001
56.	Shri Mahadev Poojari	5,001
57.	Shri Gangadhar Bangera, Airoli	5,000
58.	Shri Chandra Shekar N Poojary	5,000
59.	Shri Laxman Narayan Poojary	5,000
60.	Shri Ravi Sanil [H.Treasurer,Billawar Association,Mumbai]	5,000
61.	Smt. Savitri Macha Poojari & Family	5,000
62.	Shri Uday Manjunath Poojary	5,000
63.	Shri Ashok Kotian [M/s. Nikhil Hydraulics]	5,000
64.	Shri Ratnakar Chandan [Hotel Status, Lower Parel]	5,000
65.	Shri Raghavendra Devadiga	5,000
66.	M/S. Prasiddha Corporate Services	5,000
67.	Shri Srinivas Billava	5,000
68.	Smt. Jyoti Prakash Hegde, Kuntini & Family	5,000
69.	Shri Jaykar Poojari, Badakere	5,000

ಕೃತಜ್ಞತೆಗಳು :

ನಮ್ಮ ಈ ಬಿಲ್ಲವ ಸೇವಾ ಸಂಘ ಕುಂದಾಪುರ (ರಿ.) ಮುಂಬಯಿ ಇದಕ್ಕೆ ಉದಾರ ನೆರವು ನೀಡಿ ಸಹಕರಿಸಿದ ದೇಣಿಗೆದಾರರಿಗೆ, ಲೆಕ್ಕ ಪರಿಶೋಧಕ ಮೆಸರ್ಸ್ ಕೆ. ವಿ. ಜೋಶಿ & ಕಂಪನಿ, ಆಂತರಿಕ ಲೆಕ್ಕಪರಿಶೋಧಕ ಕು. ಶಿವಾನಿ ಎನ್. ಪೂಜಾರಿ ಮತ್ತು ಕು. ಸ್ವಪ್ನಾ ಎಸ್. ಪೂಜಾರಿ, ವಾರ್ಷಿಕ ವರದಿಯನ್ನು ಅಚ್ಚುಕಟ್ಟಾಗಿ ಮುದ್ರಿಸಿಕೊಟ್ಟ ನವೀನ್ ಪ್ರಿಂಟರ್ಸ್ ಮಾಟುಂಗ ಮತ್ತು ಹಿತೈಷಿಗಳಿಗೆ, ಪೊಲೀಸ್ ದಳದವರಿಗೆ, ಸಕಾಲದಲ್ಲಿ ಸಭಾಗೃಹವನ್ನು ಒದಗಿಸಿಕೊಟ್ಟು ಸಹಕರಿಸಿದ ಆರ್ಯ ಸಮಾಜ ಸಭಾಗೃಹದ ಆಡಳಿತ ಮಂಡಳಿಗೆ ಮತ್ತು ಪ್ರತ್ಯಕ್ಷ ಯಾ ಪರೋಕ್ಷವಾಗಿ ಸಹಕರಿಸಿದ ಸರ್ವ ಸದಸ್ಯ ಬಾಂಧವರಿಗೆ ನಮ್ಮ ಹೃತ್ಪೂರ್ವಕ ವಂದನೆಗಳು.

ಸ್ಥಳ : ಮುಂಬಯಿ
ದಿನಾಂಕ : 25.10.2026

ಆಡಳಿತ ಮಂಡಳಿಯ ಪರವಾಗಿ

ಸುಧಾಕರ ಸಿ. ಪೂಜಾರಿ
(ಗೌರವ ಪ್ರಧಾನ ಕಾರ್ಯದರ್ಶಿ)

ಸಂಘದ ಧ್ಯೇಯ ಮತ್ತು ಉದ್ದೇಶಗಳು

1. ಸಮಾಜದ ಅಸಹಾಯಕ ಜನರಿಗೆ ಸಾಮಾಜಿಕ, ಆರ್ಥಿಕ, ಶೈಕ್ಷಣಿಕ ಹಾಗೂ ಸಾಂಸ್ಕೃತಿಕ ಬೆಳವಣಿಗೆಗೆ ಪ್ರೋತ್ಸಾಹ ನೀಡುವುದು. ಸಂಘದ ಸದಸ್ಯರ ಕುಟುಂಬದ ಸರ್ವತೋಮುಖ ಅಭಿವೃದ್ಧಿಗೆ ಶ್ರಮಿಸುವುದು ಹಾಗೂ ಕಲಾಕೌಶಲ್ಯದ ಪ್ರತಿಭೆಗಳಿಗೆ ಉತ್ತೇಜನ ನೀಡುವುದು.
2. ಸಾಹಿತ್ಯ, ಕ್ರೀಡೆ ಹಾಗೂ ಲಲಿತ ಕಲೆಗಳಿಗೆ ಉತ್ತೇಜನ ನೀಡುವುದು.
3. ಸಮಾಜದ ದುರ್ಬಲರಿಗೆ ವೈದ್ಯಕೀಯ ಸಹಾಯವನ್ನು ಒದಗಿಸುವುದು; ಹಾಗೂ ಜಾತಿ ಮತ ಧರ್ಮಗಳ ತಾರತಮ್ಯವಿಲ್ಲದೆ ಸರ್ವರಿಗೂ ವೈದ್ಯಕೀಯ ಸವಲತ್ತನ್ನು ನೀಡುವರೆ ಮತ್ತು ಇನ್ನಿತರ ಅಗತ್ಯ ನೆರವು ನೀಡುವಂತಹ ಚಟುವಟಿಕೆಗಳನ್ನು ನಡೆಸಿಕೊಂಡು ಹೋಗುವುದು; ಇದಕ್ಕಾಗಿ ದವಾಖಾನೆ, ನರ್ಸಿಂಗ್ ಹೋಮ್, ಹಾಸ್ಪಿಟಲ್‌ಗಳನ್ನು ತೆರೆಯುವುದು; ಅಥವಾ ಅಂತಹ ಕಾರ್ಯಗಳನ್ನು ಮಾಡುತ್ತಿರುವ ಇತರ ಸಂಸ್ಥೆಗಳಿಗೆ ಬೆಂಬಲ ನೀಡುವುದು.
4. ರಾಷ್ಟ್ರೀಯ ಏಕತೆಗಾಗಿ ಅನ್ಯ ಸಮಾಜದ ಯಾ ಧರ್ಮದ ಜನರೊಡನೆ ಪರಸ್ಪರ ತಿಳುವಳಿಕೆ ಹಾಗೂ ಒಗ್ಗಟ್ಟನ್ನು ಬೆಳೆಸುವರೆ ಅವರ ಚಟುವಟಿಕೆಗಳಿಗೆ ಬೆಂಬಲ ನೀಡುವುದು.
5. ಸಹಕಾರಿ ಚಳುವಳಿ ಹಾಗೂ ಸಹಕಾರಿ ಸಂಘಗಳನ್ನು ಸ್ಥಾಪಿಸುವುದು ಹಾಗೂ ಸ್ಥಾಪನೆಗೆ ಪ್ರೋತ್ಸಾಹ ಕೊಡುವುದು.
6. ಬ್ರಹ್ಮಶ್ರೀ ನಾರಾಯಣ ಗುರುದೇವರ "ಒಂದೇ ಜಾತಿ, ಒಂದೇ ಮತ ಹಾಗೂ ಒಬ್ಬನೇ ದೇವರು" ಎನ್ನುವ ಉದಾತ್ತ ಬೋಧನೆಯನ್ನು ಪ್ರಚಾರ ಮಾಡುವುದು.
7. ಸಂಘದ ಈ ಮೇಲಿನ ಧ್ಯೇಯ ಯಾ ಉದ್ದೇಶಗಳಿಗೆ ಉತ್ತೇಜನ ನೀಡಲು ಅನುಕೂಲವಾಗುವಂತಹ ಇನ್ನಿತರ ನ್ಯಾಯಬದ್ಧ ಚಟುವಟಿಕೆಗಳನ್ನು ಕೈಗೊಳ್ಳುವುದು.

BILLAVA SEVA SANGHA KUNDAPURA (REGD.), MUMBAI

ESTD.: 1943 (Regd. No. : E-0012620 dated 29 January 1990) REGD.: 1990

NOTICE OF THE 38TH ANNUAL GENERAL MEETING

Notice is hereby given that the **Thirty-Eighth Annual General Meeting of Billava Seva Sangha Kundapura (Regd.), Mumbai,** will be held **on Sunday, 15 November 2026, at 10.30 a.m.,** at Aarya Samaj Hall, 232, Perin Nariman Street (Bazargate), Fort, Mumbai - 400 001, to transact the business set out in the Agenda below.

Members are cordially requested to attend the meeting punctually.

Note regarding quorum : The quorum for the meeting shall be as prescribed under the Byelaws of the Sangha. If a quorum is not present within half an hour of the appointed time, the meeting shall stand adjourned to 11.00 a.m. on the same day and at the same venue. The members then present shall constitute the quorum and shall be competent to transact the business set out in the Agenda.

Place : Mumbai
Date : 25th October 2026

On Behalf of Managing Committee

Sudhakar C. Poojari
Hon. General Secretary

AGENDA

1. Lighting the Lamp and Prayer
2. Welcome address.
3. To read and confirm the Minutes of the previous Annual General Meeting.
4. To consider and approve the Annual Report for the year 2025-2026.
5. To consider and approve the duly audited Income and Expenditure Account for the year 2025-2026 and the Balance Sheet as at 31 March 2026.
6. To appoint auditor(s) for the years 2026-2028 and fix their remunaration and to appoint Internal Auditors.
7. To consider and approve the proposed amendments to the Sangha's Byelaws.
8. To elect the new members of the Managing Committee for the term 2026-2028.
9. To discuss the repairs required at the Sangha's Registered Office at Fort, Mumbai, and take an appropriate decision.
10. To discuss the difference in the amount stated in the Purchase Agreement relating to the Sangha's office at 101, 9 Mansi, Naupada, Thane (West).
11. To receive an Explanation regarding the Change Reports submitted to the Office of the Charity Commissioner.
